# ಕನ್ನಡ ಸರಸ್ವತಿಯ ಕಂದ 'ಕಾವ್ಯಾನಂದ' ಚಿರನಿದ್ರೆಗೆ



ಭಾನುವಾರ ರಾತ್ರಿ ಬೆಂಗಳೂರಿನಲ್ಲಿ ನಿಧನರಾದ ಖ್ಯಾತ ಕವಿ ಡಾ. ಸಿದ್ದಯ್ಯ ಪುರಾಣಿಕರವರಿಗೆ ಇಂದು ಅಂತಿಮ ನಮನವನ್ನು ಮುಖ್ಯಮಂತ್ರಿ ಎಂ. ವೀರಪ್ಪಮೊಯ್ಲಿ ಜನತಾದಳದ ನಾಯಕರುಗಳಾದ ಎಸ್.ಆರ್. ಬೊಮ್ಮಾಯಿ, ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್, ಎಚ್.ಡಿ. ದೇವೇಗೌಡ, ಮೇಯರ್ ಜಿ.ಕುಪ್ಪುಸ್ವಾಮಿ, ಮನಪಾ ಸದಸ್ಯ ಸೋಮಣ್ಣ ಮತ್ತಿತರರು ಸಲ್ಲಿಸಿದರು.

ಬೆಂಗಳೂರು, ಸೆ.೫- ಕನ್ನಡದ ಖ್ಯಾತ ಸಾಹಿತಿ, ಕಾವ್ಯಾನಂದ ಎಂದೇ ಪ್ರಖ್ಯಾತರಾಗಿದ್ದ ಡಾ.ಸಿದ್ದಯ್ಯ ಪುರಾಣಿಕ್ ಅವರು ನಿನ್ನೆ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಅವರಿಗೆ ೭೬ ವರ್ಷ ವಯಸ್ಸಾಗಿತ್ತು. ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅವರು ಅಗಲಿದ್ದಾರೆ.

ತೀವ್ರ ಅಸ್ವಸ್ಥರಾಗಿದ್ದ ಅವರನ್ನು ಚಿಕಿತ್ಸೆಗಾಗಿ ಮ್ಯಾರ್ಟ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಅವರು ಅಲ್ಲಿ ನಿನ್ನೆ ರಾತ್ರಿ ೧೧ ಗಂಟೆ ಸುಮಾರಿನಲ್ಲಿ ವಿಧಿವಶರಾದರು.

ಐಎಎಸ್ ಅಧಿಕಾರಿಯಾಗಿದ್ದ ಪುರಾಣಿಕರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆ ಅನುಪಮ. ಕರ್ನಾಟಕ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತ್ತು. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಅಲ್ಲದೇ ವಿವಿಧ ಪ್ರಶಸ್ತಿಗಳನ್ನು ಅವರು ಪಡೆದಿದ್ದರು.

ಅವರು ೫೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡ ನಾಡು, ನುಡಿಗಾಗಿ ಅವಿರತವಾಗಿ ಶ್ರಮಿಸಿದ್ದ ಸಿದ್ದಯ್ಯ ಪುರಾಣಿಕರು ಸುಲಲಿತ ಕಾವ್ಯ ರಚನೆಗೆ ಪ್ರಸಿದ್ಧರಾಗಿದ್ದರು.

ರಾಯಚೂರು ಜಿಲ್ಲೆಯ ಕುಕನೂರು ತಾಲ್ಲೂಕಿನ ದ್ಯಾಂಪುರದಲ್ಲಿ ೧೫ನೇ ಜೂನ್ ೧೯೧೮ರಲ್ಲಿ ಪಂಡಿತ ಕಲ್ಲಿನಾಥ ಶಾಸ್ತ್ರಿಯವರ ಪುತ್ರನಾಗಿ ಜನಿಸಿದ ಸಿದ್ದಯ್ಯಪುರಾಣಿಕರು ಚಿಕ್ಕಂದಿನಿಂದಲೇ

(ನಾಲ್ಕನೇ ಪುಟಕ್ಕೆ)

PUB : E SANJE
DATE : 5/9/94
NEWS ITEM : FRONT PAGE HEADLINE

## ಕಾವ್ಯಾನಂದರು ಚಿರನಿದ್ರೆಗೆ

(ಒಂದನೇ ಪುಟದಿಂದ)

ಸಾಹಿತ್ಯದ ಬಗ್ಗೆ ಅಪಾರವಾದ ಆಸಕ್ತಿ ಹೊಂದಿದ್ದರು.

ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಪದವಿ ಪಡೆದ ನಂತರ ಹೈದರಾಬಾದ್‌ನ ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದರು. ೧೯೪೬ರಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ತಹಸೀಲ್ದಾರರಾಗಿ ನೇಮಕಗೊಂಡರು.

೧೯೫೬ರಲ್ಲಿ ಭಾರತೀಯ ಆಡಳಿತ ಸೇವೆ(ಐಎಎಸ್) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅವರು, ಸಾರಿಗೆ ಆಯುಕ್ತರಾಗಿ ಮತ್ತು ಕಾರ್ಮಿಕ ಆಯುಕ್ತರಾಗಿ ಅಪಾರ ಸೇವೆ ಸಲ್ಲಿಸಿ ದಕ್ಷ ಆಡಳಿತಗಾರರೆಂಬ ಹೆಗ್ಗಳಿಕೆಗೆ ಪಾತ್ರರಾದರು. ೧೯೭೬ರಲ್ಲಿ ನಿವೃತ್ತಿಹೊಂದಿದ ಪುರಾಣಿಕರು ತಮ್ಮ ವಿಶ್ರಾಂತ ಜೀವನದಲ್ಲಿ ಸಾರಸ್ವತ ಲೋಕದತ್ತ ತಮ್ಮ ಗಮನ ಸಂಪೂರ್ಣಹರಿಸಿದರು.

ಡಾ.ಸಿದ್ದಯ್ಯ ಪುರಾಣಿಕರು ೮ ಕವನ ಸಂಕಲನಗಳು, ೭ ಜೀವನ ಚರಿತ್ರೆಗಳು ಮತ್ತು ೪ ನಾಟಕಗಳು ಸೇರಿದಂತೆ ಒಟ್ಟು ೫೦ ಪುಸ್ತಕಗಳನ್ನು ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿ ಅಜರಾಮರರಾಗಿದ್ದಾರೆ.

ಶರಣ ಚರಿತಾಮೃತ(ಗದ್ಯ) ಮತ್ತು ವಚನೋದ್ಯಾನ (ವಚನ ಸಂಕಲನ) ಇವು ಪುರಾಣಿಕರು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಅಪಾರ ಕೊಡುಗೆಯಾಗಿದೆ. ಇದಲ್ಲದೆ ಹಲವಾರು ಪದ್ಯಗದ್ಯ ಸಂಗ್ರಹಗಳು, ಕವಿತೆಗಳು, ನಾಟಕ ಮುಂತಾದವುಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯಗಗನದಲ್ಲಿ ಮಿನುಗುವ ನಕ್ಷತ್ರವಾಗಿದ್ದಾರೆ.

ಡಾ.ಪುರಾಣಿಕರಿಗೆ ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವು 'ಗೌರವ ಡಾಕ್ಟರೇಟ್' ಪದವಿ ನೀಡಿ ಗೌರವಿಸಿತು.

'ಕನ್ನಡ ರಾಜ್ಯೋತ್ಸವ ಪ್ರಶಸ್ತಿ' ಸಾಹಿ[...]
ಅಕಾಡೆಮಿ ಪ್ರಶಸ್ತಿ, ದಿವ್ಯಾರ ಪ್ರಶ[...]
ಗಳಂತಹ ಹಲವಾರು ಪ್ರತಿಷ್ಠಿತ ಪ್ರಶ[...]
ಗಳು ತಾವಾಗಿಯೇ ಇವರನ್ನು ಹುಡು[...]
ಕೊಂಡು ಹೋದವು.

೧೯೭೭ರಲ್ಲಿ ಡಾ.ಸಿದ್ದಯ್ಯಪುರಾಣಿ[...]
ರನ್ನು ೫೦ನೇ ಅಖಿಲ ಭಾರತ ಕನ್ನ[...]
ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾ[...]
ನೇಮಿಸುವ ಮೂಲಕ ಕನ್ನಡ ಸಾಹಿ[...]
ಪರಿಷತ್ತು ತನ್ನನ್ನೇ ಸನ್ಮಾನಿಸಿಕೊಂಡ[...]
ತಾಯಿತು. ಹಲವಾರು ಸಂಘ- ಸಂಸ್ಥೆಗಳ[...]
ದಲೂ ಪುರಸ್ಕಾರ ಪಡೆದಿದ್ದ ಅವರು ಬ[...]
ಸಮಿತಿಯ ಉಪಾಧ್ಯಕ್ಷರೂ ಆಗಿದ್ದರು.

ಕನ್ನಡ ಸಾಹಿತ್ಯಕ್ಕೆ ಮಾತ್ರ ಇವರ ಸೇ[...]
ಸೀಮಿತವಾಗಿರಲಿಲ್ಲ. ಡಾ.ಪುರಾಣಿಕ[...]
ಇಂಗ್ಲೀಷ್, ಹಿಂದಿ, ಉರ್ದು, ಭಾ[...]
ಗಳಲ್ಲೂ ಉದ್ದಾಮ ಪಂಡಿತರಾಗಿ ಸೇ[...]
ಸಲ್ಲಿಸಿದ್ದರು.

ಡಾ. ಸಿದ್ದಯ್ಯ ಪುರಾಣಿಕರು ಇತ್ತೀ[...]
ದಿನಗಳಲ್ಲಿ ಕನ್ನಡ ಪರ ಹೋರಾಟ[...]
ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊ[...]
ಮುಂಚೂಣಿಯಲ್ಲಿದ್ದರು. ಕ್ರಿ.ಸ. [...]
ಲಯಗಳಲ್ಲಿ ಕನ್ನಡದಲ್ಲೇ ಪ್ರಾ[...]
ಸಲ್ಲಿಸುವಂತೆ ಆಗ್ರಹಿಸಿ ಇತ್ತೀಚೆಗೆ[...]
ಮುಖ್ಯರದ ನೇತೃತ್ವವನ್ನು ಸಹ[...]
ವಹಿಸಿಕೊಂಡಿದ್ದರು.

ಈ ಮುನ್ನ ನಾಡು-ನುಡಿ[...]
ಗಾಗಿ ಹಾಗೂ ನೆಲ- ಜಲ- ಭಾ[...]
ತಂತೆ ಕೇಂದ್ರ ಸರ್ಕಾರವು[...]
ಮಲತಾಯಿ ಧೋರಣೆಯನ್ನ[...]
ಅದರ ಕಣ್ತೆರೆಸುವ ಸಲುವಾ[...]
ದೇವೇಗೌಡ, ವೈ.ಎಸ್.ವಿ.[...]
ದವರೊಂದಿಗೆ ಸೇರಿ ರಚಿಸ[...]
ಟಕ ವಿಕಾಸ ವೇದಿಕೆಯ[...]
ರಾಗಿಯೂ ಪುರಾಣಿಕರು [...]



# ಖ್ಯಾತ ಸಾಹಿತಿ ಸಿದ್ದಯ್ಯಪುರಾಣಿಕ್ ನಿಧನ

ಬೆಂಗಳೂರು, ೮- ಕನ್ನಡದ ಖ್ಯಾತ ಕವಿ ಸಿದ್ದಯ್ಯ ಪುರಾಣಿಕ ಅವರು ಇಂದು ರಾತ್ರಿ ೧-೦೦ ಗಂಟೆಗೆ ಹೃದಯಾಘಾತದಿಂದ ನಿಧನ ಹೊಂದಿದರು.

ಅವರಿಗೆ ೭೬ ವರ್ಷ ವಯಸ್ಸಾಗಿತ್ತು.

(ಕೊನೆಯ ಪುಟಕ್ಕೆ)

# ಖ್ಯಾತ ಸಾಹಿತಿ ಸಿದ್ದಯ್ಯಪುರಾಣಿಕ್ ನಿಧನ

(ಒಂದನೇ ಪುಟದಿಂದ)

ತೀವ್ರ ಅಸ್ವಸ್ಥರಾಗಿದ್ದ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಅವರು ಪತ್ನಿ, ಮೂವರು ಪುತ್ರಿಯರು ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ.

ಕನ್ನಡದ ಕಟ್ಟಾಳು ಆಗಿದ್ದ ಅವರು ಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ್ದರು.

೫೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಅವರು ಕನ್ನಡ ಭಾಷೆಗಾಗಿ ಅವಿರತ ಹೋರಾಟ ನಡೆಸಿದ್ದರು. ಐ.ಎ.ಎಸ್. ಅಧಿಕಾರಿಯಾಗಿ ಕಾರ್ಮಿಕ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ಪುರಾಣಿಕರು ಸುಲಲಿತ ಕಾವ್ಯ ರಚನೆಗೆ ಹೆಸರುವಾಸಿಯಾಗಿದ್ದರು.

ರಾಯಚೂರು ಜಿಲ್ಲೆಯ ದ್ಯಾಂಪುರದಲ್ಲಿ ಜನಿಸಿದ್ದ ಅವರು ಸ್ವಯಂ ಪ್ರಯತ್ನದಿಂದ ಮುಂದೆ ಬಂದಿದ್ದರು. ಪುರಾಣಿಕರು ರಾಜ್ಯ ಅಕಾಡೆಮಿ ಹಾಗೂ ರಾಷ್ಟ್ರೀಯ ಮಟ್ಟದ ವಿವಿಧ ಪ್ರಶಸ್ತಿಗಳನ್ನು ಪಡೆದಿದ್ದರು.

# 'ವಚನೋದ್ಯಾನ'ದ ಚಿರವಿಹಾರಿ

ಮನೆಯ ಮನೆಗಳು ಇಲ್ಲಿನ್ನಿ ಹಾಗೆಯೇ ರಣಾಂಗಣಗಳಾಗುವುವೆ: ರಾತ್ರಿ ಅವರ ರಣಾಂಗಣವೊಂದು ಮದುವೆ ಮಂಟಪವಾಗಿ ಪರಿವರ್ತನೆಗೊಳ್ಳುವುದೊಂದು ಚಮತ್ಕಾರದ ಪ್ರಸಂಗ. "ತ್ರಿಭುವನಮಲ್ಲ"ದ ಕ್ಲೈಮ್ಯಾಕ್ಸ್, ಅನ್ನಬಹುದಾದ ಈ ಪ್ರಸಂಗದಿಂದಾಗಿ ಸುಮಾರು ಐವತ್ತು ವರ್ಷಗಳ ಹಿಂದೆ ಓದಿದ ಕಾವ್ಯಾನಂದರ ಆ ಕಾದಂಬರಿ ಹಾಗೆಯೇ ಮನಸ್ಸಿನಲ್ಲಿ ಇಂದಿಗೂ ನೆನಪಿನಲ್ಲುಳಿದಿದೆ.

'ಕಾವ್ಯಾನಂದ'ರ ಗದ್ಯಶೈಲಿಯೇ ಹಾಗೆ. ಒಮ್ಮೆ ಹೊಗಿದರೆ ನಮ್ಮನ್ನು ಆ ಸನ್ನಿವೇಶದಲ್ಲಿ ಒಬ್ಬರನ್ನಾಗಿ, ಅಲ್ಲಿನ ಎಲ್ಲವನ್ನೂ ಅನುಭವಿಸುವಂತೆ ಮಾಡುವಂಥದು. 'ಆಹವಮಲ್ಲ' ಬಿರುದಾಂಕಿತ ಕಲ್ಯಾಣ ಚಾಲುಕ್ಯರ ಮೂರನೆಯ ವಿಕ್ರಮಾದಿತ್ಯನ ಕುರಿತಾದ ಆ ಕಾದಂಬರಿಯು ತುಂಬ ನಾಟಕೀಯ ಸನ್ನಿವೇಶಗಳೇ. ಹಾಗೆಂದ ಮಾತ್ರಕ್ಕೆ ಅದು ಸ್ವಕಪೋಲಕಲ್ಪಿತ ಕಂತೆಯಲ್ಲ. ಇತಿಹಾಸದ ಪುಟಗಳಲ್ಲಿ ಅಡಗಿರುವ ಸತ್ಯ.

ಜಿಲ್ಲಾಧಿಕಾರಿ, ಕಾರ್ಮಿಕ ಇಲಾಖೆಯ ಕಮಿಷನರರೇ ಮೊದಲಾಗಿ ಅನೇಕ ಉನ್ನತ ಹುದ್ದೆಗಳನ್ನಲಂಕರಿಸಿಯೂ 'ವಚನೋದ್ಯಾನ'ದಲ್ಲಿ ವಿಹರಿಸಿದವರು 'ಕಾವ್ಯಾನಂದ'. ಹದಿನೈದನೆಯ ವಯಸ್ಸಿಗೇ ಕನ್ನಡ ಚಳವಳಿಯತ್ತ ಒಲವು ಮೂಡಿಸಿಕೊಂಡ ಸಿದ್ದಯ್ಯ ಪುರಾಣಿಕ (ಜನನ: ೧೮-೬-೧೯೧೮) ಅವರಲ್ಲೇ ಕನ್ನಡ, ಉರ್ದು, ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಹೇಗೋ ಯೋಗಾಭ್ಯಾಸ, ಮಲ್ಲಕಂಬದಲ್ಲಿಯೂ ಸಮರ್ಥರೆನಿಸಿ 'ಗಟ್ಟಿಗ'ರಾಗಿ ನಿಂತರು.

ಮನೆಯ ಮೊದಲ ಪಾಠಶಾಲೆ ಎಂಬ ಮಾತು ಅವರ ಪಾಲಿಗೆ ತುಂಬ ಅನ್ವರ್ಥಕ. ತಂದೆ ಪಂ. ಕಲ್ಲಿನಾಥ ಶಾಸ್ತ್ರಿಗಳಿಂದ ವ್ಯಾಕರಣ, ಛಂದಸ್ಸು, ಕಾವ್ಯ, ಶರಣ-ಸಂತರ ಕಥಾವಳಿಯೇ ಮೊದಲಾಗಿ ಪಾಠ. ಓದ, ಊರಿನಗೊಂ ಸಿದ್ದಯ್ಯನವರ ಬೆಳವಣಿಗೆಗೆ ಸಹಕಾರಿ. ಹುಟ್ಟೂರು ದ್ಯಾಂಪುರದ (ರಾಯಚೂರು ಜಿಲ್ಲೆ) ಪಕ್ಕದ ಕುಕನೂರಿನ 'ವಿದ್ಯಾನಂದ ಗುರುಕುಲ'ದಲ್ಲಿ ಅಭ್ಯಾಸ ಮುಂದುವರಿಸಿದ ಸಿದ್ದಯ್ಯನವರಿಗೆ ಆ ಭಾಗದ ವಿಮೋಚನೆ ರಾಷ್ಟ್ರೀಯ ಶಾಲೆಯಾಗಿದ್ದ ಅಲ್ಲಿ ಖ್ಯಾತ ವ್ಯಾಕರಣಶಾಸ್ತ್ರಜ್ಞ ಪಾ.ಭ. ದೇಸಾಯಿಯವರು ವಿದ್ಯಾಗುರು.

ಕಲಬುರ್ಗಿಯಲ್ಲಿನ ಎರಡು ವರ್ಷಗಳ ವಾಸ್ತವ್ಯ ಸಿದ್ದಯ್ಯನವರ ಬದುಕಿಗೆ ತಿರುವು ನೀಡಿದ ಅವಧಿ. ಮೆಟ್ರಿಕ್ಯುಲೇಷನ್‌ನಲ್ಲಿ ಮೂರನೆ ರ‍್ಯಾಂಕ್. ಹೈದರಾಬಾದಿನವರೆಗೂ ಈ ಬಾಲಕನ ಖ್ಯಾತಿ ಹರಡುವಂತೆ ಮಾಡಿದವರು ಶ್ರೀ. ಹಣ್ಣಾನಿ ನಾಹೇಬರೆಂಬುವರು.

ಕನ್ನಡ ಚಳವಳಿಯಲ್ಲಿ ಒಂದಾಗಿ ಹೋದ ತರುಣ ಸಿದ್ದಯ್ಯ ಪುರಾಣಿಕರಿಗೆ ಅಲ್ಲಿ ಆಗಾಗ ಬಂದು ಹೋದ ಬೇಂದ್ರೆ, ಗೋಕಾಕ, ಮುಗಳಿ, ಬೆಟಗೇರಿ ಮುಂತಾದವರಿಂದ ಸಹಪ್ಯಾಸದಿಂದು ಜತೆಗೆ ಮಾರ್ಗದರ್ಶನ. 'ಕರ್ನಾಟಕದ ಗಾಂಧಿ' ಎಂದೇ ಪ್ರಸಿದ್ಧರಾಗಿದ್ದ ಹರ್ಡೇಕರ್ ಮಂಜಪ್ಪನವರು ಈ ವಿಲಕ್ಷಣ ಪ್ರತಿಭಾವಂತನನ್ನು ಗುರುತಿಸಿದ್ದೂ ಆಗಲೇ.

ಇಂಟರ್ ಪರೀಕ್ಷೆಯ ಹೊತ್ತಿಗೆ ಪ್ರಾರಂಭವಾದ ಅನಾರೋಗ್ಯ ಒಂದು ಹಂತದಲ್ಲಿ ಕ್ಷಯವೆಂದು ಗುರುತಿಸಲ್ಪಟ್ಟು ಆತಂಕವುಂಟು ಮಾಡಿತು. ಮುಂದೆ ಅದು "ಕ್ಷಯವಲ್ಲ"ವೆಂದು ನಿರ್ಧಾರವಾದರೂ ಇಂಟರ್ ಪರೀಕ್ಷೆಯ ಅವಕಾಶ ತಪ್ಪಿಹೋಗಿತ್ತು. ಮಾನಸಿಕ ಕ್ಷೋಭೆಯ ಕಾರಣ ಮನೆಬಿಟ್ಟು ಓಡಿಹೋದ ಸಿದ್ದಯ್ಯ ಪುರಾಣಿಕ ಸೇರಿದ್ದು ಅಂಬಟ್ಟಿಗೆ. ಅಲ್ಲಿಯ ಹರ್ಡೇಕರ್ ಮಂಜಪ್ಪನವರ ಆಶ್ರಮಕ್ಕೆ.

"ಅಲ್ಲಿ ಇದ್ದದ್ದು ಆರೇ ತಿಂಗಳಾದರೂ ಕಲಿತದ್ದು ಅಪಾರ"ವೆಂದು ಪುರಾಣಿಕರೇ ಒಂದೆಡೆ ಹೇಳಿದ್ದಾರೆ. ಊರಿಗೆ ಹಿಂತಿರುಗಿದ ಅವರು ಖಾಸಗಿಯಾಗಿ ಇಂಟರ್ ಪರೀಕ್ಷೆಗೆ ಕುಳಿತರು. ಕನ್ನಡ-ಸಂಸ್ಕೃತಗಳಲ್ಲಿ ಮೊದಲನೆಯವರಾಗಿ, ಇಂಗ್ಲಿಷ್‌ನಲ್ಲಿ ಎರಡನೆಯವರಾಗಿ ಒಟ್ಟಾರೆ ಶ್ರೇಣಿಯ



ಸ್ಥಾನದಲ್ಲಿ ಪಾಸಾದ ಪುರಾಣಿಕರು ಉಸ್ಮಾನಿಯಾ ವಿಶ್ವವಿದ್ಯಾಲಯ ಸೇರಿದರು.

ಕನ್ನಡ ನಾಡು-ನುಡಿಯ ಒಲವಂತೂ ಬಲವಾಗುತ್ತಲೇ ಹೋಗಿತ್ತು. ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಅವಕಾಶವೊದಗಿಬಂದದ್ದೂ ಆಗಲೇ. ಹೈದರಾಬಾದಿನ ೨೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಮೊದಲ ಬಾರಿಗೆ ಮೈಸೂರಿನ ವೇದಿಕೆಗೆ ಕವಿತಾವಾಚನ. ಅನಂತರದ ಅಪ್ಪ..., ಹಿರಿಯರ ಮೆಚ್ಚುಗೆಗಳು ಪುರಾಣಿಕರನ್ನು ಕಂಬಳಿಯಿಂದಿಳಿದಂತೆ.

## ಆನಂದ-ಆಘಾತ

ಬಿ.ಎ.ಯಲ್ಲಿ ಮೊದಲಿಗರಾಗಿ - ಅದರೂ ಸ್ವರ್ಣಪದಕ ಕೈ ತಪ್ಪಿ- ಪಾಸಾದ ಸಿದ್ದಯ್ಯ ಪುರಾಣಿಕರು ಕಾನೂನು, ಇಂಗ್ಲಿಷ್ ಎಂ.ಎ. ಅಭ್ಯಾಸವೆಂದು ಅಲೆಯುವ ಹೊತ್ತಿಗೆ ತಹಸೀಲ್ದಾರ್ ಹುದ್ದೆಯ ಸಂದರ್ಶನಕ್ಕೆ ಕರೆ ಬಂತು. ಅದರ ಅದರ ಐದು ಹಂತಗಳಲ್ಲಿ ಪಾಸಾಗಿ ಆರನೆ ಹಂತಕ್ಕೆ ಆಯ್ಕೆಯಾದಾಗ ತಮ್ಮ ಬಗ್ಗೆಯೇ ಅಚ್ಚರಿಪಟ್ಟುಕೊಂಡರಂತೆ ಪುರಾಣಿಕರು. ತಹಸೀಲ್ದಾರರಾಗಿ ನಿಯುಕ್ತಿಯಾದ ದಿನವೇ ತಂಗಿ ಸಾವಿನ ಮನೆ ಸೇರಿದ್ದು ಅವರಿಗೆ ಬಲವಾದ ಆಘಾತ. ಅಪ್ಪನ ದುಃಖವನ್ನು ಮರೆಸಲೆಂದು ಗೃಹಸ್ಥನಾಗಬೇಕಾದ

ಒಪ್ಪಿದ್ದು, ಪುರಾಣಿಕ ಸಾಂಸಾರಿಕವಾಗಿ ತಮ್ಮ ವೃತ್ತಿಜೀವನ ಆರಂಭಿಸಿದರು. ಅಲ್ಲಿಂದ ಸಾಗಿದ ಅವರ ಸೇವಾಮಾರ್ಗ ವಿವಿಧ ಮಜಲುಗಳನ್ನು ಮುಟ್ಟಿತು. ಅದರ ಹೋದೆಡೆಯಲ್ಲೆಲ್ಲ ಕನ್ನಡ ನಾಡು ನುಡಿಯ ಕುರಿತ ಯೋಚನೆ-ಯೋಜನೆ. ಕನ್ನಡದ ಪ್ರಾತಿನಿಧಿಕ ಲೇಖಕರೊಂದಿಗಿನ ಸುದೀರ್ಘ ಸಂಪರ್ಕ. ಕರ್ನಾಟಕ ರಾಜ್ಯೋದಯದ ಶುಭ ಸಂದರ್ಭದಲ್ಲಿ 'ಹೊತ್ತಿತೊ ಹೊತ್ತಿತು ಕನ್ನಡದ ದೀಪ'ವೆಂಬ ಅವರ ಕವಿತೆಗೆ ಇಂದಿಗೂ ಸಾರ್ವಕಾಲಿಕವೆನ್ನುವ ಗೌರವ.

ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ, ಉಪಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ, ಹಣಕಾಸು ಇಲಾಖೆಯಲ್ಲಿ ಕೆಲಕಾಲ; ಆಮೇಲೆ ಕೋಲಾರ ಜಿಲ್ಲಾಧಿಕಾರಿ; ಹಾಗೆ ಇಲಾಖೆ ಆಯುಕ್ತ; ಬೆಳಗಾವಿಯ ಜಿಲ್ಲಾಧಿಕಾರಿ; ಕೊನೆಗೆ ಕಾರ್ಮಿಕ ಇಲಾಖೆಯ ಕಮಿಷನರ್ ಆಗಿ ಸೇವೆಯಿಂದ ನಿವೃತ್ತಿ.

ಕೆಲಕಾಲ 'ಲೋಕವಾಣಿ' ಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದ ಪುರಾಣಿಕರು ಬಸವ ಸಮಿತಿಯಲ್ಲಿ ಹದಿನೈದು ವರ್ಷಗಳವರೆಗೆ 'ಬಸವಪಥ' 'ಬಸವ ಜರ್ನಲ್'ಗಳ ಪ್ರಧಾನ ಸಂಪಾದಕರಾಗಿಯೂ, ಸಂಶೋಧನ-ಪ್ರಕಟಣ ವಿಭಾಗದ ನಿರ್ದೇಶಕರಾಗಿಯೂ ಶ್ರಮಿಸಿದರು.

ಕಾವ್ಯಾನಂದರದು ಎಲ್ಲೆಯಿರದ ಕನ್ನಡ ಪ್ರೇಮ. ಭಾಷಾ ದುರ್ಭಾಗಿಗಾಗಿ ಅವರು ಗಾಜಿನ ಮನೆಯಲ್ಲಿ ಕುಳಿತು ಆದೇಶ ನೀಡುತ್ತ ಹೋಗಲಿಲ್ಲ. ಸ್ವತಃ ಕಾರ್ಯಾನೆಗಳನ್ನು, ಸಂಸ್ಥೆಗಳನ್ನು, ವ್ಯಕ್ತಿಗಳನ್ನು ಭೇಟಿ ಮಾಡಿ ಆ ವಾತಾವರಣ ಅಲ್ಲಿ ಸ್ಥಾಯಿಯಾಗುವಂತೆ ಏರ್ಪಾಟು ಮಾಡಿಬಂದರು. ಗೋಕಾಕ ಚಳವಳಿಯಲ್ಲಂತೂ ಅವರದು ಸಕ್ರಿಯ ಪಾತ್ರ.

ಪುರಾಣಿಕರನ್ನು ನಾವು ನೆನೆಯುವುದು ಅವರು ನಮ್ಮ ಶರಣರ ವಚನಗಳನ್ನು ಅಂಗ್ಲರಿಗೂ ಅರ್ಥವಾಗುವಂತೆ ಮಾಡಿರುವುದಕ್ಕಾಗಿ. 'ವಚನೋದ್ಯಾನ', 'ಮಹಾ ಚಂದನ' 'ಬಸವಣ್ಣನವರ ಜೀವನ ಹಾಗೂ ಸಂದೇಶ' ಮುಂತಾದ ಕೃತಿಗಳಲ್ಲಿ ಕಾವ್ಯಾನಂದರು ಶರಣ ದರ್ಶನದ ಸ್ವಾದ ಮತ್ತು ಮಹತಿಯನ್ನು ಬಿಂಬಿಸಿದ್ದಾರೆ. ಸೂರು ಮಜಲುಗಳ ಅವರ ಅಂತ ಅನುಭವದ ಸಮ್ಮ ವಚನ ಸಾಹಿತ್ಯದ ಸೇಯೋಗ್ಯವಾಕ್ಕೆ ಕಾರಣವಾಯಿತು.

ಬದುಕಿನುದ್ದಕ್ಕೂ ಕವಿಯೊಬ್ಬ ಸವಿಯನ್ನು ಕಂಡು ಕುಲುಕುಲು ನಕ್ಕ ಬಹುಮುಖದಲ್ಲಿದ್ದು ವ್ಯಕ್ತಿತ್ವದಲ್ಲೂ ಮಹತ್ತ ಚಲಿತ್ರವಾದದ್ದು ತುಂಬ ಅಪರೂಪ. ಅವರ ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಮೂಲಕ ಪ್ರತಿವರ್ಷ 'ಕಾವ್ಯಾನಂದ ಪ್ರಶಸ್ತಿ' ನೀಡಲ್ಪಡುತ್ತಿರುವುದು ಸಿದ್ದಯ್ಯ ಪುರಾಣಿಕರ ಹೃದಯ ವೈಶಾಲ್ಯಕ್ಕೊಂದು ನಿದರ್ಶನ.

• ವೃಷಭೇಂದ್ರಯ್ಯ

**'ಹೊತ್ತಿತೊ ಹೊತ್ತಿತು ಕನ್ನಡದ ದೀಪ'ವೆಂದು ಕನ್ನಡಿಗರ ಹೃದಯದಲ್ಲಿ ಕನ್ನಡದ ಜ್ಯೋತಿ ಬೆಳಗಿಸಿದ ಹಿರಿಯ ಕವಿ ಚೇತನ 'ಕಾವ್ಯಾನಂದ'ರು ಇಂದು ನಮ್ಮ ನಡುವಿಲ್ಲ. ೭೬ ವರ್ಷಗಳ ಸಾರ್ಥಕ ಬಾಳ್ವೆ ಪೂರೈಸಿದ ಹಿರಿಯ ಆಡಳಿತಕಾರ ಡಾ. ಸಿದ್ದಯ್ಯ ಪುರಾಣಿಕರು ಕನ್ನಡ ಚಳವಳಿಯಲ್ಲಿಯೂ ಮಹತ್ವದ ಪಾತ್ರ ವಹಿಸಿದರು. ಅವರು ಶರಣ ಸಾಹಿತ್ಯಕ್ಕೆ ನೀಡಿದ ಕೊಡುಗೆಯಂತೂ ಮೌಲಿಕ.**

ಸಂಯುಕ್ತ ಕರ್ನಾಟಕ 11-9-1994

PUB: SAMYUKTA KARNATAKA
DATE: 11/9/94
NEWSITEM: FRONT PAGE NEWS BRIEF



ಮುಖ್ಯಮಂತ್ರಿ ವೀರಪ್ಪಮೊಯ್ಲಿ ಅವರು ಸೋಮವಾರ ನಿಧನರಾದ ಸಾಹಿತಿ ಡಾ. ಸಿದ್ದಯ್ಯ ಪುರಾಣಿಕ ಅವರ ನಿವಾಸಕ್ಕೆ ಭೇಟಿ ನೀಡಿ ಮೃತರ ಕಳೇಬರಕ್ಕೆ ಪುಷ್ಪಗುಚ್ಛ ಇಟ್ಟು ಅಂತಿಮ ಗೌರವ ಸಲ್ಲಿಸಿದರು. ಸಾರಿಗೆ ಸಚಿವ ಭೀಮಣ್ಣಾ ಖಂಡ್ರೆ ಅವರು ಈ ಸಂದರ್ಭದಲ್ಲಿ ಹಾಜರಿದ್ದರು.

# ಕಣ್ಮರೆಯಾದ 'ಕಾವ್ಯಾನಂದ'

ಬೆಂಗಳೂರು : 'ಕಾವ್ಯಾನಂದ' ಎಂದು ಖ್ಯಾತನಾಮರಾಗಿದ್ದ ಡಾ. ಸಿದ್ದಯ್ಯ ಪುರಾಣಿಕ ಅವರು ಭಾನುವಾರ ರಾತ್ರಿ ಹೃದಯಾಘಾತದಿಂದ ನಿಧನ ಹೊಂದಿದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಅವರು ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ತೀವ್ರ ಅಸ್ವಸ್ಥರಾಗಿದ್ದ ಅವರನ್ನು ವೊಕ್ಹಾರ್ಟ್ ಆಸ್ಪತ್ರೆಗೆ ಸೇರಿಸಲಾಗಿತ್ತು. ರಾತ್ರಿ ಒಂದು ಗಂಟೆಯ ಸುಮಾರಿಗೆ ಅವರು ವಿಧಿವಶರಾದರು.

ಅಧ್ಯಕ್ಷರಾಗಿದ್ದ ಅವರು ಕನ್ನಡ ಭಾಷೆಯ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದು ಅದಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರು.

ಐ. ಎ. ಎಸ್. ಅಧಿಕಾರಿಯಾಗಿದ್ದ ಅವರು ಕಾರ್ಮಿಕ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರು. ರಾಯಚೂರು ಜಿಲ್ಲೆಯ ಕುಕ್ಕನೂರು ತಾಲ್ಲೂಕಿನ ದ್ಯಾಂಪುರದಲ್ಲಿ 18 ನೇ ಜೂನ್ 1918 ರಲ್ಲಿ ಜನಿಸಿದ ಅವರು ಚಿಕ್ಕಂದಿನಿಂದಲೆ ಕನ್ನಡ ಸಾಹಿತ್ಯದ ಬಗ್ಗೆ ಅಪಾರ ಜ್ಞಾನದಾಹ ಹೊಂದಿದ್ದರು. ಇವರಿಗೆ ಕರ್ನಾಟಕ ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿತ್ತು.

ಗುಲ್ಬರ್ಗಾ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದ ನಂತರ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಎಂ. ಎ. ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ್ದರೂ 1957 ರಲ್ಲಿ ಭಾರತೀಯ ಆಡಳಿತ ಸೇವೆ ಪರೀಕ್ಷೆಯಲ್ಲಿ ತೇರ್ಗಡೆಯಾದ ಅವರು ಸಾರಿಗೆ ಆಯುಕ್ತರಾಗಿ ನೇಮಕಗೊಂಡು ಅಲ್ಲಿ ಸೇವೆ ಸಲ್ಲಿಸಿ ದಕ್ಷ ಆಡಳಿತಗಾರರೆಂದು ಹೆಸರು ಪಡೆದರು.

ನಿವೃತ್ತಿ ಹೊಂದಿದ ನಂತರ ಕನ್ನಡ ಸಾರಸ್ವತ ಲೋಕಕ್ಕೆ ತಮ್ಮ ಜೀವನ ವನ್ನು ಮುಡುಪಾಗಿಟ್ಟು ಅವರು ಕನ್ನಡ ಸಾಹಿತ್ಯದಲ್ಲಿ ಕೃಷಿ ಮಾಡಿದರು.

ಕಾವ್ಯಾನಂದರು 8 ಕವನ ಸಂಕಲನ, 7 ಜೀವನ ಚರಿತ್ರೆ ಮತ್ತು 4 ನಾಟಕಗಳು ಸೇರಿ ಒಟ್ಟು 50 ಪುಸ್ತಕಗಳನ್ನು ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದರು.

ಅವರ 'ಶರಣ ಚಿಂತಾಮೃತ' (ಗದ್ಯ) ಹಾಗೂ 'ವಚನೋದ್ಯಾನ' (ವಚನ ಸಂಕಲನ) ಗಳು ಕನ್ನಡ ಸಾಹಿತ್ಯದಲ್ಲಿ ಭಾರೀ ಹೆಸರು ಗಳಿಸಿದ ಕೃತಿಗಳಾಗಿವೆ. ಇದರೊಂದಿಗೆ ಹಲವಾರು ಪದ್ಯ ಸಂಗ್ರಹಗಳು, ಕವಿತೆಗಳು, ನಾಟಕ ಮೊದಲಾದವುಗಳನ್ನು ರಚಿಸಿ ಅಪಾರ ಜನ ಮನ್ನಣೆ ಗಳಿಸಿದ್ದರು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿ, ಮೊದಲಾದ ಪ್ರಶಸ್ತಿಗಳು ತಮ್ಮ ಜೀವಿತ ಅವಧಿಯಲ್ಲಿ ಗಳಿಸಿದ್ದರು. ಅವರ ಭಾಷಾ ಪಾಂಡಿತ್ಯ ಕನ್ನಡ ಭಾಷೆಗಳ ಸೀಮಿತವಾಗಿರದೆ ಇಂಗ್ಲೀಷ್, ಹಿಂದಿ, ಉರ್ದು, ಭಾಷೆಗಳಿಗೂ ವಿಸ್ತರಿಸಿತ್ತು.

58 ನೇ ಕನ್ನಡ ಸಾಹಿತ್ಯ ಸಮ್ಮೇಳನದ

# ಗಣ್ಯರ ಶ್ರದ್ಧಾಂಜಲಿ

ಬೆಂಗಳೂರು : 'ಕಾವ್ಯಾನಂದ' ಎಂಬ ಹೆಸರಿನಿಂದ ಖ್ಯಾತರಾಗಿದ್ದ ಸಿದ್ದಯ್ಯ ಪುರಾಣಿಕ ಅವರು ಕೇವಲ ಸಾಹಿತಿಗಳು ಮಾತ್ರವಲ್ಲದೆ ದಕ್ಷ ಅಧಿಕಾರಿಗಳೂ ಆಗಿದ್ದರು. ಅವರ ನಿಧನದಿಂದ ಕನ್ನಡ ಸಾರಸ್ವತ ಲೋಕ ಬರಡಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಮುಖ್ಯಮಂತ್ರಿ ವೀರಪ್ಪ ಮೊಯಿಲಿ ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗೊ. ರು. ಚನ್ನಬಸಪ್ಪ, ಮಾಜಿ ಅಧ್ಯಕ್ಷ ಪ್ರೊ | ಜಿ. ಎಸ್. ಸಿದ್ದಲಿಂಗಯ್ಯ, ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿ ಚಂದ್ರಶೇಖರ ಕಂಬಾರ, ಕನ್ನಡಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಾರಾಯಣ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್‌ನ ಸಭಾಪತಿ ಡಿ. ಕಲ್ಮಣ್‌ಕರ್, ಸದಸ್ಯ ಡಾ. ಸಿದ್ದಲಿಂಗಯ್ಯ, ಟಿ. ಎನ್. ನರಸಿಂಹಮೂರ್ತಿ, ಉಪಸಭಾಪತಿ ಶ್ರೀಮತಿ ರಾಣಿ ಸತೀಶ್, ವಿಧಾನ ಸಭಾಧ್ಯಕ್ಷ ವಿ. ಎಸ್. ಕೌಜಲಗಿ, ಲೋಕಸಭೆಯ ಉಪಾಧ್ಯಕ್ಷ ಎಸ್. ಮಲ್ಲಿಕಾರ್ಜುನಯ್ಯ, ಪುರಾಣಿಕ ನಿಧನಕ್ಕೆ ಶೋಕ ವ್ಯಕ್ತಪಡಿಸಿದ್ದಾರೆ.

ಮಾಜಿ ಉಪರಾಷ್ಟ್ರಪತಿ ಬಿ. ಡಿ. ಜತ್ತಿ, ಕೇಂದ್ರ ಸಚಿವ ಜಾಫರ್ ಷರೀಫ್, ಹೆಚ್. ಡಿ. ದೇವೇಗೌಡ, ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ, ಎಸ್. ಆರ್. ಬೊಮ್ಮಾಯಿ. ಎಸ್. ಬಂಗಾರಪ್ಪ, ಎಸ್. ನಿಜಲಿಂಗಪ್ಪ, ಆರ್. ವಿ. ದೇಶಪಾಂಡೆ, ಭೀಮಣ್ಣ ಖಂಡ್ರೆ ಎಚ್. ವಿಶ್ವನಾಥ್, ಹೆಚ್. ಎಮ್. ರೇವಣ್ಣ ಆರ್. ಪಿ. ಚೌಧರಿ, ಬಿ. ಶಿವಣ್ಣ ಆರ್. ನಾಯ್ಕ್, ಸಂಸತ್ ಸದಸ್ಯರಾದ ಎಮ್. ರಾಜಶೇಖರ ಮೂರ್ತಿ, ಬಸವರಾಜ ಪಾಟೀಲ್, ಅನ್ವರಿ, ಚಂದ್ರಪ್ರಭಾ ಅರಸು, ಬಿ. ಜೆ. ಪಿ. ಶಾಸಕ ಜೀವರಾಜ ಆಳ್ವ, ಶಾಸಕ ವಾಟಾಳ್ ನಾಗರಾಜ್, ಮಾಜಿ ಶಾಸಕ ನಾರಾಯಣ್ ಕುಮಾರ್ ಮಹಾಪೌರರಾದ ಜಿ. ಕುಪ್ಪಸ್ವಾಮಿ ಅವರುಗಳು ಪುರಾಣಿಕರ ನಿಧನಕ್ಕೆ ತಮ್ಮ ತೀವ್ರ ಸಂತಾಪ ಸೂಚಿಸಿದ್ದಾರೆ.

ಕಾವೇರಿ ಕನ್ನಡ ಯುವಕ ಸಂಘ, ಅಖಿಲ ಕರ್ನಾಟಕ ಯುವ ಪರಿಷತ್, ಕನ್ನಡ ಸಂಘರ್ಷ ಸಮಿತಿ ಮುಂತಾದ ಸಂಘ ಸಂಸ್ಥೆಗಳು ಪುರಾಣಿಕ ನಿಧನಕ್ಕೆ ತಮ್ಮ ಅತೀವ ಶೋಕ ವ್ಯಕ್ತಪಡಿಸಿದ್ದಾರೆ.

PUB: HOSA DIGANTHA
DATE: 6/9/94
NEWS ITEM: FRONT PAGE



ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ ಅವರು ಸೋಮವಾರ ನಗರದಲ್ಲಿ ನಿಧನರಾದ ಸಾಹಿತಿ ಡಾ. ಸಿದ್ದಯ್ಯ ಪುರಾಣಿಕ್ ಅವರ ನಿವಾಸಕ್ಕೆ ಭೇಟಿ ನೀಡಿ ಮೃತರ ಕಳೇಬರಕ್ಕೆ ಪುಷ್ಪಗುಚ್ಛ ಇಟ್ಟು ಅಂತಿಮ ಗೌರವ ಸಲ್ಲಿಸಿದರು. ಸಾರಿಗೆ ಸಚಿವ ಭೀಮಣ್ಣ ಖಂಡ್ರೆ ಅವರೂ ಈ ಸಂದರ್ಭದಲ್ಲಿ ಹಾಜರಿದ್ದರು.

# 'ಕಾವ್ಯಾನಂದ'ರಿಗೆ ಕಣ್ಣೀರ ನಮನ' ಶ್ರದ್ಧಾಂಜಲಿ

(ಒಂದನೇ ಪುಟದಿಂದ)

ರಿದು ಆಗಿದ್ದ ಮಹಾಗಣ ಅಂತಿಮ ದರ್ಶನ ಪಡೆದು ಅಶ್ರುತರ್ಪಣ ನೀಡಿದರು.

ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಮಾಜಿ ಉಪಮುಖ್ಯಮಂತ್ರಿ ಬಿ.ಡಿ. ಜತ್ತಿ, ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ಸಚಿವರುಗಳಾದ ಭೀಮಣ್ಣ ಖಂಡ್ರೆ, ಆರ್.ಎಸ್. ನಾಯಕ್, ಡಾ. ಎ.ಬಿ. ಮಲಕರೆಡ್ಡಿ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ವಿ. ದೇಶಪಾಂಡೆ ಮುಂತಾದವರು ಪುಷ್ಪಗುಚ್ಛವಿರಿಸಿ ಗೌರವ ಸಲ್ಲಿಸಿದರು.

ಪ್ರದೇಶ ಜನತಾದಳದ ಅಧ್ಯಕ್ಷ ಹಾಗೂ ಸಂಸತ್ ಸದಸ್ಯರಾದ ಎಚ್.ಡಿ. ದೇವೇಗೌಡರು ಕರ್ನಾಟಕ ವಿಕಾಸ ವೇದಿಕೆಯ ಸೂತ್ರಧಾರರಾಗಿದ್ದ ಸಿದ್ದಯ್ಯ ಪುರಾಣಿಕರ ಪಾರ್ಥಿವ ಶರೀರಕ್ಕೆ ಪುಷ್ಪಾಂಜಲಿ ಅರ್ಪಿಸಿ ಕಂಬನಿ ಮಿಡಿದರು.

ಹಿರಿಯ ಸಾಹಿತಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ದೇ. ಜವರೇಗೌಡ, ಪ್ರೊ. ಎಲ್.ಎಸ್. ಶೇಷಗಿರಿರಾವ್, ಅ.ರಾ. ಮಿತ್ರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಾರಾಯಣ ಮತ್ತಿತರರು ಅಗಲಿದ ಸಾಹಿತ್ಯ ವರೇಣ್ಯರಿಗೆ ಅಂತಿಮ ನಮನ ಸಲ್ಲಿಸಿದರು.

ಬೇಲಿ ಮಠ, ಸಿಂಗೆರಿ ಮಠ ಮತ್ತು ಕೋಳದ ಮಠದ ಶ್ರೀಗಳು ಮೃತರ ಆತ್ಮಕ್ಕೆ ಶಾಂತಿ ಕೋರಿದರು. ಮಾತೆ ಮಹಾದೇವಿಯವರು ವಚನ ಪಠಣ ಮಾಡಿದರು.

ರಾಜ್ಯ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ವಿ.ಎಸ್. ಮಳೀಮಠ, ಪದ್ಮಭೂಷಣ ಡಾ. ಎಂ.ಸಿ. ಮೋದಿ, ಪದ್ಮಶ್ರೀ ಆರ್.ಎಂ.ಬಿ. ಆರಾಧ್ಯ, ಮಾಜಿ ಶಾಸಕ ಜಿ. ನಾರಾಯಣಕುಮಾರ್, ನಗರ ಸಭಾ ಸದಸ್ಯ ನರೇಂದ್ರ ಬಾಬು ಮುಂತಾದವರು ಮೃತರಿಗೆ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಆರ್. ರಾಮಲಿಂಗಂ, ನಗರ ಪೊಲೀಸ್ ಕಮೀಷನರ್ ಪಿ. ಕೋದಂಡರಾಮಯ್ಯ, ವರು ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಭೇಟಿಯಿತ್ತು ಅಂತಿಮ ಗೌರವ ಸಲ್ಲಿಸಿದರು.

ಬಿ.ಡಿ. ಜತ್ತಿ ಶೋಕ: ಬಸವ ಸಮಿತಿಯ ಉಪಾಧ್ಯಕ್ಷರಾಗಿ, ಪ್ರಕಟಣಾ ವಿಭಾಗದ ಮುಖ್ಯಸ್ಥರಾಗಿ, ಮತ್ತು ಮಾರ್ಗದರ್ಶಕ್ಕೂ ಮುಖ್ಯ ಕಾಲ ಬಸವ ಪಥ ಹಾಗೂ ಬಸವ ಜರ್ನಲ್ ಪತ್ರಿಕೆಗಳ ಪ್ರಧಾನ ಸಂಪಾದಕರಾಗಿ ಅಪಾರವಾಗಿ ಒಂದು ವರ್ಷ ಸೇವೆಯನ್ನು ಸಲ್ಲಿಸಿದ್ದ ಡಾ. ಸಿದ್ದಯ್ಯ ಪುರಾಣಿಕರ ನಿಧನಕ್ಕೆ ಮಾಜಿ ಉಪರಾಷ್ಟ್ರಪತಿ, ಬಸವ ಸಮಿತಿ ಅಧ್ಯಕ್ಷ ಬಿ.ಡಿ. ಜತ್ತಿ ಮತ್ತು ಇತರ ಸದಸ್ಯರು ತೀವ್ರ ಸಂತಾಪ ಸೂಚಿಸಿ ಶ್ರದ್ಧಾಂಜಲಿ ಸಮರ್ಪಿಸಿದ್ದಾರೆ.

ಸಿದ್ಧಗಂಗಾ ಶ್ರೀಗಳು: ಶಿವಾನುಭವಿಗಳೂ ಶರಣ ಸಾಹಿತ್ಯ ಕ್ಷೇತ್ರದಲ್ಲಿ ಶರಣಬಂಧು ಮಾನವ, ಮಹೋದ್ಯಾನ ಹಾಗೂ ಮಹಾ ಸಂತರಾಗಿ ಕಣ್ಣ ಡಾ. ಸಿದ್ದಯ್ಯಪುರಾಣಿಕರ ನಿಧನದಿಂದ ರಾಷ್ಟ್ರಕ್ಕೆ ತುಂಬಲಾರದ ಹಾನಿ ಉಂಟಾಗಿದೆಯೆಂದು ಸಿದ್ಧಗಂಗಾ ಮಠಾಧ್ಯಕ್ಷ ಶಿವಕುಮಾರಸ್ವಾಮಿಗಳು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕಾವ್ಯಾನಂದ ಎಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಪ್ರಿಯರಿಗೆ ಚಿರಪರಿಚಿತರಾಗಿದ್ದ ಡಾ. ಪುರಾಣಿಕರು ಸಾಹಿತ್ಯ ಕ್ಷೇತ್ರದಲ್ಲೇ ಪ್ರಸಿದ್ಧಿಯನ್ನು ತೆಯನ್ನು ಅವರ ವಿವಿಧ ಮಜಲುಗಳಲ್ಲಿ ಗಳಿಸಿದ್ದರು. ಅವರ ಅಗಲಿಕೆಯಿಂದಾಗಿ ನಾಡಿಗೆ, ಸಾಮಾಜಿಕ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಅತಿ ದೊಡ್ಡ ನಷ್ಟವಾಗಿದೆ ಎಂದು ಅವರು ತಿಳಿಸಿದ್ದಾರೆ.

ಗಣ್ಯರ ಕಂಬನಿ: ಕನ್ನಡದ ಖ್ಯಾತ ಕವಿ ಸಿದ್ದಯ್ಯ ಪುರಾಣಿಕರ ನಿಧನಕ್ಕೆ ವಿಧಾನಸಭಾ ಧ್ಯಕ್ಷ ವಿ.ಎಸ್. ಕೌಜಲಗಿ, ಆರೋಗ್ಯ ಸಚಿವ ಡಾ. ಎ.ಬಿ. ಮಲಕರೆಡ್ಡಿ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಬಿ.ಎಸ್. ಪಾಟೀಲ (ಸಾಸನೂರ), ಜನತಾ ದಳದ ರಾಷ್ಟ್ರೀಯ ಅಧ್ಯಕ್ಷ ಎಸ್.ಆರ್. ಬೊಮ್ಮಾಯಿ, ವಿಧಾನಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರಾಗಿರುವ ಆರ್.ವಿ. ದೇಶಪಾಂಡೆ, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ, ಮಾಜಿ ಶಾಸಕ ಜಿ. ನಾರಾಯಣ ಕುಮಾರ್, ಬಿ.ಜೆ.ಪಿ. ಮುಖಂಡರಾದ ಬಿ.ಬಿ. ಶಿವಪ್ಪ, ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್. ಈಶ್ವರಪ್ಪ, ಶಾಸಕ ರಾಮಚಂದ್ರಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಅನಂತಕುಮಾರ್, ಶ್ರೀಮತಿ ಪ್ರಮೀಳಾ ನೇಸರ್ಗಿ ಮತ್ತಿತರ ಗಣ್ಯರೂ ಪುರಾಣಿಕರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿರುವರು.

ಬೇಲಿಮಠದ ಶ್ರೀಗಳ ದುಃಖ: ಡಾ. ಸಿದ್ದಯ್ಯ ಪುರಾಣಿಕರ ವಿಧಿವಶರಾದ ವಾರ್ತೆಯನ್ನು ಕೇಳಿ ತೀವ್ರ ದುಃಖ ವ್ಯಕ್ತಪಡಿಸಿರುವ ಬೇಲಿಮಠದ ಶ್ರೀ ಶಿವರುದ್ರ ಮಹಾಸ್ವಾಮಿಯವರು ಕನ್ನಡ ನಾಡು-ನುಡಿಗಳ ಬಗ್ಗೆ ಪುರಾಣಿಕರಿಗಿದ್ದ ಅಪಾರ ಕಾಳಜಿ, ಅನ್ಯಾಯದ ವಿರುದ್ಧ ಸಿಡಿದೇಳುವ ಗುಣಗಳನ್ನು ಸ್ಮರಿಸಿ ಕೊಂಡು ಅವರ ನಿಧನದಿಂದ ಕರ್ನಾಟಕ ನಿಜಕ್ಕೂ ಬಡವಾಗಿದೆ ಎಂದಿದ್ದಾರೆ.

ಸಂದೇಶಗಳ ಮಹಾಪೂರ: ಡಾ. ಸಿದ್ದಯ್ಯ ಪುರಾಣಿಕ್ ಅವರ ಅಮರ ಚೇತನಕ್ಕೆ ಶ್ರದ್ಧಾಂಜಲಿ ಸಲ್ಲಿಸುವ ಸಂದೇಶಗಳ ಮಹಾಪೂರವೇ ಪತ್ರಿಕಾ ಕಚೇರಿಗೆ ಹರಿದು ಬರುತ್ತಿದೆ.

ರಾಜ್ಯಪಾಲ ಖುರ್ಷಿದ್ ಆಲಂ ಖಾನ್, ಮುಖ್ಯಮಂತ್ರಿ ವೀರಪ್ಪಮೊಯ್ಲಿ, ಅವರಿಂದ ಹಿಡಿದು ನಾಡಿನಾದ್ಯಂತ ಕವಿ-ಸಾಹಿತಿಗಳು, ಸಚಿವರು, ಸಂಸತ್ ಸದಸ್ಯರು, ವಿವಿಧ ಕ್ಷೇತ್ರಗಳ ಗಣ್ಯರು, ವಿವಿಧ ಸಂಘ ಸಂಸ್ಥೆಗಳ ಗಣ್ಯರು, ಸಾಂಸ್ಕೃತಿಕ-ಸಾಮಾಜಿಕ ಕಾರ್ಯಕರ್ತರು, ಕಲಾವಿದರು ಹೀಗೆ ಎಲ್ಲ ಸ್ತರಗಳಿಂದಲೂ ಶ್ರದ್ಧಾಂಜಲಿಯ ಪ್ರವಾಹ ಹರಿದಿದೆ.

ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಆರ್.ಎಸ್. ನಾಯಕ್, ರಾಜ್ಯ ಸಾರಿಗೆ ಮಂತ್ರಿ ಭೀಮಣ್ಣ ಖಂಡ್ರೆ, ಪಶುಸಂಗೋಪನಾ ಖಾತೆ ಸಚಿವ ಡಾ. ಎಚ್.ಆರ್. ರಾಜು, ಜನತಾದಳದ ಧುರೀಣರಾದ ಎಚ್.ಡಿ. ದೇವೇಗೌಡ, ಜೆ.ಎಚ್. ಪಟೇಲ್, ಸಿದ್ದರಾಮಯ್ಯ, ಬಿ.ಎಲ್. ಶಂಕರ್, ಬೆಂಗಳೂರು ಮಹಾ ನಗರಪಾಲಿಕೆ ಸದಸ್ಯ ವಿ. ಸೋಮಣ್ಣ ಅವರು ತಮ್ಮ ಸಂತಾಪ ಸಂದೇಶಗಳನ್ನು ಕಳುಹಿಸಿರುವರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಂಡ್ಯ ಜಿಲ್ಲಾ ಶಾಖೆಯ ಅಧ್ಯಕ್ಷ ಜಿ.ಟಿ. ವೀರಪ್ಪ, ಬೆಂಗಳೂರು ನಗರ ಜಿಲ್ಲಾ ಶಾಖೆಯ ಅಧ್ಯಕ್ಷ ಕೆ.ವಿ. ಚಂದ್ರಣ್ಣಗೌಡ, ಶ್ರೀ ಕೋಳದ ಮಠ ಮಹಾಸಂಸ್ಥಾನದ ಡಾ. ಶ್ರೀ ಶಾಂತವೀರ ಮಹಾಸ್ವಾಮಿಗಳು ದುಃಖಿತ ಸಂದೇಶದಲ್ಲಿ ತಿಳಿಸಿದ್ದಾರೆ.

ರಾಜ್ಯ ಬ್ರಿಗೇಡ್ ವಿರಾಮದ ಖಾತೆ ಸಚಿವ ಎಂ.ಎಸ್. ಆಶಾದೇವಿ, ರಾಜ್ಯ ವಿಧಾನ ಪರಿಷತ್ತಿನ ಉಪಾಧ್ಯಕ್ಷೆ ಶ್ರೀಮತಿ ರಾಣಿ ಸತೀಶ್, ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿ ಅಧ್ಯಕ್ಷ ಡಾ. ಆರ್.ವಿ. ಶೇಷಾದ್ರಿ ಗವಾಯಿ, ಕನ್ನಡ ಚಳವಳಿ ನಾಯಕ, ಶಾಸಕ ವಾಟಾಳ್ ನಾಗರಾಜ್, ಕೆಪಿಸಿಸಿ (ಐ)ಯ ಕಾನೂನು ವಿಭಾಗದ ಅಧ್ಯಕ್ಷ ಕೆ.ಎಂ. ಮಹದೇವನ್, ನಗರ ಯುವ ಜನತಾದಳದ ಉಪಾಧ್ಯಕ್ಷ ವಿ.ಎಸ್. ವೆಂಕಟೇಶ್ ಕುಮಾರ್ ಮತ್ತಿತರ ಪ್ರಮುಖರೂ ಸಿದ್ದಯ್ಯ ಪುರಾಣಿಕರಿಗೆ ಶ್ರದ್ಧಾಂಜಲಿ ಸಲ್ಲಿಸಿರುವರು.

ಕರ್ನಾಟಕ ವಿಮೋಚನಾ ರಂಗ, ಕನ್ನಡ ವಿದ್ಯಾರ್ಥಿ ಪರಿಷತ್ತು, ಕಾವೇರಿ ಕನ್ನಡ ಯುವಕರ ಸಂಘ, ಕರ್ನಾಟಕ ಯುವಜನ ಸಂಘಟನೆ, ಬಿ.ಎಸ್.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಣಾ ಸಮಿತಿ, ಕನ್ನಡ ದೇಶ ಸಂಘಟನೆ, ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ (ಅಲಸೂರು), ಅಖಿಲ ಕರ್ನಾಟಕ ಯುವ ಪರಿಷತ್, ಸಂಗಮ ಸಾಂಸ್ಕೃತಿಕ ಕೇಂದ್ರ (ಮತ್ತಿಕೆರೆ) ಮತ್ತಿತರ ನಗರದ ಅನೇಕ ಸಂಘ-ಸಂಸ್ಥೆಗಳೂ ಪುರಾಣಿಕರಿಗೆ ತಮ್ಮ ಚರಮ ಗೌರವ ಸಲ್ಲಿಸಿವೆ.

# ಡಾ. ಸಿದ್ದಯ್ಯ ಪುರಾಣಿಕ್ ಅಂತ್ಯಕ್ರಿಯೆ

ಬೆಂಗಳೂರು, ಸೆ. ೫- ಸೋಮವಾರ ಮಧ್ಯರಾತ್ರಿ ನಂತರ ೧-೦೦ ಗಂಟೆ ಸುಮಾರಿಗೆ ಶಿವೈಕ್ಯರಾದ ನಾಡಿನ ಹೆಸರಾಂತ ಕವಿ, ದಕ್ಷ ಆಡಳಿತಗಾರ, ಜನಪರ ಹೋರಾಟಗಾರ ವಿಚಾರವಾದಿ ಡಾ. ಸಿದ್ದಯ್ಯ ಪುರಾಣಿಕ್‌ರವರ ಅಂತ್ಯಕ್ರಿಯೆಯನ್ನು ಇಂದು ಸಂಜೆ ನಗರದ ಚಾಮರಾಜಪೇಟೆಯ ವೀರಶೈವ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಯಿತು.

ಅಲೀ ಅಸ್ಕರ್ ರಸ್ತೆಯಲ್ಲಿರುವ ಶ್ರೀಯುತರ ನಿವಾಸದ ಬಳಿ ಪೊಲೀಸ್ ಗೌರವ ರಕ್ಷೆ ನೀಡಿದ ಬಳಿಕ ಪಾರ್ಥಿವ ಶರೀರವನ್ನು ಪುಷ್ಪಾಲಂಕೃತ ವಾಹನದಲ್ಲಿ ರುದ್ರಭೂಮಿಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಬೆಳಗಿನಿಂದ ಸಂಜೆಯವರೆಗೂ ಹಲವಾರು ಗಣ್ಯರು, ಕನ್ನಡ ಅಭಿಮಾನಿಗಳು ಸಾಹಿತ್ಯಾರಾಧಕರು ಹಾಗೂ ನೂರಾರು ನಾಗ

(ಎಂಟನೇ ಪುಟ ನೋಡಿ)

PUB: SAMYUKTA KARNATAKA.
DATE: 6/9/94
NEWS ITEM: FRONT PAGE NEWS BRIEF &, PAGE 8



The Chief Minister, Mr. Veerappa Moily, paying homage to noted Kannada writer, Siddaiah Puranik, who passed away in Bangalore on Monday. The Transport Minister, Mr. Bhimanna Khandre (wearing spectacles) is with him.-Report on page 13

**Siddaiah Puranik**

BANGALORE, Sept. 5.

Mr. Siddaiah Puranik, noted Kannada writer and retired IAS officer passed away here today. He was 76 and is survived by his wife, a son and two daughters.

Poetry was the forte of Mr. Puranik, who wrote under the pen name 'Kavyananda'. He had presided over the 58th Kannada Sahitya Sammelana and was in recent years active in safeguarding interests of Kannada and Kannadigas. He was the president of the Karnataka Vikasa Vedike.

PUB : THE HINDU

DATE : 6/9/94

NEWS ITEM : REGIONAL NEWS PAGE. OBITUARY COLUMN

ಪ್ರಾತಃ ಸ್ಮರಣೀಯನಿಗೆ

# ಕಣ್ಣೀರಿನ ನಮನ

"ಶರಣನ ಮರಣದಲ್ಲಿ ನೋಡು!" ಎಂಬ ಲೋಕೋಕ್ತಿ ಇದೆ. ಡಾ॥ ಸಿದ್ಧಯ್ಯ ಪುರಾಣಿಕರ ನಿಧನ ಅದಕ್ಕೊಂದು ಉತ್ತಮ ಪುರಾವೆಯಾಗಿದೆ. ಪ್ರಕಾಂಡ ಪಂಡಿತರಾದ ಚನ್ನಕವಿ ದ್ಯಾಂಪುರರ ಮೊಮ್ಮಗ. ಶ್ರೀ



ಕಲ್ಲಿನಾಥ ಶಾಸ್ತ್ರಿಗಳ ಮಗನಾಗಿ ಮನೆಯಲ್ಲಿ ಸಾಹಿತ್ಯ ಸುಗಂಧದ ಮಾಸೆಯಲ್ಲಿ ಸಿದ್ಧರಾಗುವ ಅವಕಾಶ. ಹೆಣ್ಣುಮಕ್ಕಳ ಜಾನಪದಗೀತೆ, ಗ್ರಾಮಾಂತರ ಜನಜೀವನದ ಹಂತಿಯ ಪದ, ಕೋಲಾಟದ ಪದಗಳ, ನೈಜ ಜೀವನದ ಹಂತಿಯ ಪದ, ಸಿದ್ಧಯ್ಯನವರ ಸುಪ್ತ ಕೃತಿ ಸಂಗೀತವನ್ನು ಪಡೆದ ಹೃದಯದೀ ಮನಸ್ಸಿಗೆ "ಚೆಲುವಿಂತು ಹದನಾಡು ... ಹೊಲನನ್ನು" ಎಂಬ ಕವಿ ಅಂಬಿಕಾತನಯದತ್ತರ ಹೊಲನನ್ನು ನಾಂದಿ ಹಾಡಿತು ಎನ್ನಬಹುದು. ಚಾಣ್ಣುಡಿ ಅವರ ಭಾವೀ ಜೀವನಕ್ಕೆ ನಾಂದಿ ಹಾಡಿತು. ದ್ಯಾಂಪುರದಲ್ಲಿ 1918 ಜೂನ 18 ರಂದು ಜನಿಸಿದ ಅವರು ಕಲಬುರ್ಗಿ, ಹೈದರಾಬಾದಗಳಲ್ಲಿ ಕಲಿತು, ಕನ್ನಡ, ಹಿಂದಿ, ಉರ್ದು, ಸಂಸ್ಕೃತದಲ್ಲಿ ಕಲಿತು, ಆಲಮಟ್ಟಿಯ ವೀರಶೈವ ವಿದ್ಯಾಲಯ ಪಾರಂಗತರಾದರು. "ಶರಣ ಸಂದೇಶ" ವಾರಪತ್ರಿಕೆಯ ಸಂಪಾದಕ ಶರಣ ಶ್ರೇಷ್ಠ ಲಿಂ॥ ಪರ್ಡೀಕರ ಮುಂಜಣ್ಣನವರ ಆಶ್ರಮದಲ್ಲಿ ದ್ದಾಗಲೇ "ನನ್ನಾತ್ಮ ಕಾವ್ಯ" ಎಂದು ಕವನ ಸಂಗ್ರಹ ತಂದು ಕಾವ್ಯಾನಂದರಾದರು. ವಕೀಲನೋ ಪ್ರಾಧ್ಯಾಪಕ ನೋ ಆಗಬೇಕಾಗಿದ್ದ ನಮ್ಮ ಜನನಾಯಕ ತಹಶೀಲ್ದಾರ ರಾದರು. ಅವರು ಸ್ವಸಾಮರ್ಥ್ಯದಿಂದ ಬೆಳಗಾವಿಯ ...ಧಿಕಾರಿಗಳಾಗಿ, ಕರ್ನಾಟಕ ರಾಜ್ಯದ ಕಾರ್ಮಿಕ ... ಹೊಂದಿದರು.

"ಶರಣ ಚಂದ್ರಾಮೃತ" "ವಚನೋದ್ಯಾನ" "ಮೊದಲು ಮಾನವನಾಗು" "ವಚನ ನಂದನ" "ಮಾನಸಸರೋವರ" "ಮರುಳಸಿದ್ಧ" (ಮುಂಕುತಿಮ್ಮನ ಕಗ್ಗದ ಮಾದರಿಯಲ್ಲಿ) ಮುಂತಾದ ಸುಮಾರು 50 ಗ್ರಂಥಗಳನ್ನು ಕನ್ನಡ ಸಾಹಿತ್ಯ—ಸಂಸ್ಕೃತಿಲೋಕಕ್ಕೆ ಧಾರೆಯೆರೆದು ಧನ್ಯಾತ್ಮರಾದರು. ಇವರ ಸಾಹಿತ್ಯಜಾಲ ನಾಟಕ, ಪ್ರಬಂಧ, ಐತಿಹಾಸಿಕ ಕಾದಂಬರಿಗಳು, ಬಾನುಲಿನಾಟಕ, ಮಕ್ಕಳ ಸಾಹಿತ್ಯದಲ್ಲಿ ಪರ್ಯಾವಸಾನಗೊಂಡಿದೆ. ಇವರ "ವಚನೋದ್ಯಾನ" ಕೃತಿಗೆ ಪಶ್ಚಿಮ ಬಂಗಾಳದ ಭಾರತೀಯ ಭಾಷಾಪರಿಷತ್ ಪುರಸ್ಕಾರ ದೊರೆತದ್ದು ಹೆಮ್ಮೆಯ ಸಂಗತಿ.

ರಾಜ್ಯ ಸಾಹಿತ್ಯ ಅಕ್ಯಾಡಮಿಯ ವರ್ಷದ ಶ್ರೇಷ್ಠ ಪುಸ್ತಕ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಸ. ಸ. ಮಾಳವಾಡ ಪುರಸ್ಕಾರ ದೊರೆತದ್ದು ವೈಶಿಷ್ಟ್ಯಪೂರ್ಣ. 1987 ರಲ್ಲಿ ಕಲಬು[ರ್ಗಿ]ಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದನ್ನು ಇಲ್ಲಿ ನೆನೆಯಬಹುದು. ಅವರ ನಾಡು—ನುಡಿಯ ಸೇವೆಯನ್ನು ಮನಗಂಡು "ಕಾವ್ಯಾನಂದ" ಎಂಬ ಅಭಿನಂದನ ಗ್ರಂಥ ಸಮರ್ಪಿಸಿ, ಸಾಹಿತ್ಯ ಲೋಕವೇ ಧನ್ಯತೆ ಪಡೆಯಿತು.

ಅವರು "ಕನ್ನಡಿಗ" ಪತ್ರಿಕೆಯ ಅಭಿಮಾನಧನರಾಗಿದ್ದರೆಂದು ನಾವು ಪ್ರಾಂಜಲ ಮನದಿಂದ ವಿನಮ್ರವಾಗಿ ಹೇಳಬಯಸುತ್ತೇವೆ. ನಮ್ಮ ಪತ್ರಿಕೆಯ ಜನ್ಮದಿನ ಸಂಚಿಕೆಗೋ, ಮತ್ತಾವುದೇ ವಿಶೇಷ ಸಂಚಿಕೆಗೋ ಕವನವೊಂದನ್ನು ದಯಪಾಲಿಸುತ್ತ ಬಂದಿದ್ದರೆಂದು ಅಭಿಮಾನದಿಂದ ವ್ಯಕ್ತಪಡಿಸುತ್ತೇವೆ. ಅವರ ಕನ್ನಡ ವಿಕಾಸ ಸಂಸ್ಥೆಯ ಅಧ್ಯಕ್ಷರುಗಳಾಗಿ ಸಮಗ್ರ ಕರ್ನಾಟಕದ ಹಿತರಕ್ಷಣೆಯಲ್ಲಿ ಮುಂಚೂಣಿಯ ಪಾತ್ರ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಇಂಗ್ಲೀಷ-ಕನ್ನಡ ನಿಘಂಟಿನ ಪ್ರವರ್ತಕರು ಅವರು "ಏನಾದರಾಗು ಮೊದಲು ಮಾನವನಾಗು" ಎಂದು ಹೇಳಿದ್ದು ಅವರ ಜೀವನ ಸಂದೇಶವೆನ್ನಬಹುದು. ಅವರ ಅನೇಕ ಗ್ರಂಥಗಳು ಬೇರೆ ಭಾಷೆಯಲ್ಲಿ ತರ್ಜುಮೆಗೊಂಡಿವೆ. ಅವರ ನಿಧನನಿಂದ ಸಮಗ್ರ ಕನ್ನಡ ಸಾಹಿತ್ಯ ಲೋಕ, ರಾಜಕೀಯ ಧುರಂಧರರು ತಲ್ಲಣಗೊಂಡು ಶೋಕ ತಪ್ತರಾಗಿ ಶ್ರದ್ಧಾಂಜಲಿ ಅರ್ಪಿಸಿದರಲ್ಲದೆ, ಸಕಲ ರಾಜ ಮರ್ಯಾದೆಯೊಂದಿಗೆ ಅಗಲಿದ ಈ ಪುಣ್ಯ ಪುರುಷನಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಈ ವಚನ ರಚನಾವರೇಣ್ಯನಿಗೆ ಶ್ರೇಷ್ಠ ಮಾನವತಾವಾದಿ, ವಚನ ರಚನಾವರೇಣ್ಯನಿಗೆ ತಕ್ಕುದಾದ ಶಾಶ್ವತ ಸ್ಮಾರಕವೊಂದನ್ನು ರಚಿಸಬೇಕೆಂದು ಸರಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೆ ವಿನಂತಿಸುತ್ತೇವೆ. ಡಾ॥ ಸಿದ್ಧಯ್ಯ ಪುರಾಣಿಕರಿಗೆ ಆ ಸರ್ವಶಕ್ತ ಸಮನ್ವಿತತೆಯು ಚಿರಶಾಂತಿಯನ್ನೀಯಲಿ ಮತ್ತು ಅವರ ಕುಟುಂಬ ವರ್ಗದವರಿಗೆಲ್ಲ ಅವರ ನಿಧನದಿಂದಾದ ಆಘಾತವನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತ ಅಗಲಿದ ಮಹಾನುಭಾವನಿಗೆ ನಮ್ಮ ಹೃತ್ಪೂರ್ವಕ ಶ್ರದ್ಧಾಂಜಲಿಯನ್ನರ್ಪಿಸಿ, ಕಣ್ಣೀರಿನ ನಮನ ಸಲ್ಲಿಸುತ್ತೇವೆ.

— ಸಂಪಾದಕರು.

PUB: KANNADIGA.

DATE: 12/9/94

NEWS ITEM: REGULAR NEWS



# Siddaiah Puranik dead

★★ BANGALORE — Renowned Kannada poet and retired IAS officer Siddaiah Puranik died here in the early hours of Monday.

He was 78 and is survived by his wife, three daughters and a son.

Writing under the pen name 'Kavyananda', Dr Puranik had written several novels and poems, besides research articles on literature. His poem 'Ajjana kolidu nannaya kudure' is a very popular Kannada rhyme among school children.

Condoling the death of the poet, Karnataka Governor Khurshed Alam Khan said the State had lost a person who fought relentlessly for Kannada language and literature. Chief Minister Veerappa Moily, in a message, also expressed grief. A host of other political and cultural luminaries and organisations have also expressed grief at his demise.

Both the Houses of Karnataka Legislature observed a minute's silence as a mark of respect to the departed poet, who was the recipient of several awards, including the State award in 1991.● ENS

## Kavyananda

☐ "Enaadaru aagu, modalu maanavanaagu" (Be what you will but be human first). That was the famous line in a poem written by Dr.Siddaiah Puranik who passed away early this week. The poet turned administrator joined service as Tahsildar in the Nizam's rule and was confirmed into IAS before retiring as labour commissioner. Being an able administrator and a prolific creative writer is an odd combination. But Dr.Puranik was an exception.

Born at Dyampur village in Yelburga taluk of Raichur district, a remote corner of a highly backward area, Dr.Puranik dedicated himself to the cause of Kannada, that too during the hard days of Nizam when Urdu was the only

PUB : INDIAN EXPRESS
DATE 6/9/94 & 11/9/94
NEWS ITEM: NEWS LINE FRONT PAGE & EXPRESS DIARY

25.9.94

## ಡಾ|| ಸಿದ್ದಯ್ಯ ಪುರಾಣಿಕ್-ಒಂದು ನೆನಪು

"ಕೊಡಗನ್ನು ನೆನೆದರೆ ಕಹಿಯೂ ಸಿಹಿಯಾಗುತ್ತದೆ" ಎಂದು ತನ್ನ ಮನದಿಂಗಿತವನ್ನು ಕೊಡಗಿನ ಬಗೆಗೆ ವ್ಯಕ್ತಪಡಿಸಿದ ನಾಡಿನ ಹಿರಿಯ ಚೇತನ ಕವಿ ಡಾ|| ಸಿದ್ದಯ್ಯ ಪುರಾಣಿಕ್ ಅವರು ಇಂದು ನಮ್ಮ ನಡುವೆ ಇಲ್ಲ. 1965 ರಿಂದ 67 ರವರೆಗೆ ಕೊಡಗಿನ ಜಿಲ್ಲಾಧಿಕಾರಿಯಾಗಿ ಅತ್ಯಂತ ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಇಲ್ಲಿಯ ಜನರ ಅಪಾರ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದರು. ಜೊತೆಗೆ ಕೊಡಗಿನ ಪ್ರಕೃತಿ ಸೌಂದರ್ಯ ಹಾಗೂ ಜನರ ಪ್ರೀತಿ ಆದರಗಳು ಡಾ|| ಪುರಾಣಿಕ್ ಅವರ ಮನಸ್ಸನ್ನು ಸೂರೆಗೊಂಡಿದ್ದವು. ಸುಮಾರು ಎರಡು ವರ್ಷಗಳ ಕಾಲ ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡಿ ಬೇರೆ ಜಿಲ್ಲೆಗೆ ಹೋದಾಗಲೂ ಕೊಡಗಿನ ಜನರ ಉದಾರ ಗುಣಗಳನ್ನು ಹಾಗೂ ಇಲ್ಲಿನ ನಿಸರ್ಗದ ಸೊಬಗು ಅವರ ಮನಸ್ಸಿನಿಂದ ಎಂದೂ ದೂರವಾಗಲಿಲ್ಲ. ಇದಕ್ಕೆ ಅವರಾಡಿದ ಈ ಮಾತುಗಳೇ ಸಾಕ್ಷಿ.

"ಕೊಡಗನ್ನು ನೆನೆದರೆ ಕಹಿಯೂ ಸಿಹಿಯಾಗುತ್ತದೆ. ಸಿಹಿ ಜೇನು ಕಿತ್ತಳೆಗಳ ಸೀಮೆಯಲ್ಲಿ ಗಾಳಿಯನ್ನು ಉಸಿರಾಡಿದಾಗ 'ಮಧುವಾತಾಯುತಾಯತೇ' ಎಂಬ ಭಾವನೆ ಉಂಟಾಗುತ್ತದೆ" ಇಲ್ಲಿನ ಜನತೊಡನೆ ಒಡನಾಡುವಾಗ ಮನದ ಮಧುಮಾತುಗಳಲ್ಲಿ ಜೇನಾಗಿ ಜಿನುಗುವ ಅನುಭವ ಉಂಟಾಗುತ್ತದೆ. ಇದು ಡಾ|| ...

... ತನ್ನದೇ ಆದ ಪರಂಪರೆಯನ್ನು ಸತ್ಸಂಪ್ರದಾಯಗಳನ್ನು, ಯತೇಚ್ಛ ಪ್ರಕೃತಿ ಸಂಪನ್ಮೂಲಗಳನ್ನು, ರಮಣೀಯತೆ, ಪಾವನತೆಗಳ ಸ್ಥಾನಗಳನ್ನು ಪಡೆದ ಈ ಪುಟ್ಟ ಜಿಲ್ಲೆ ದಿವಂಗತ ಪುರಾಣಿಕ್ ಅವರಿಗೆ ಕರ್ನಾಟಕದ ಕಾಮಧೇನೂ, ಕಲ್ಪವೃಕ್ಷವಾಗಿತ್ತು. ಎಲ್ಲ ಜಾತಿ ಮತಗಳ ಜನರು ಸೌಹಾರ್ದದಿಂದಿರುವ ಈ ಸಾಮರಸ್ಯ ಕ್ಷೇತ್ರದಲ್ಲಿ ಎಲ್ಲ ಬಗೆಯ ಸೌಕರ್ಯಗಳೂ ಸಂಪತ್ತು, ಸಮೃದ್ಧಿಯೂ, ಸಂಸ್ಕೃತಿಯೂ ಹೆಚ್ಚಿಗೆ ಇದ್ದು ಇಂದು ಮಾದರಿ ಜಿಲ್ಲೆಯಾಗಲಿ ಎಂದು ಮಹಾನ್ ಮಾನವತಾವಾದಿಯಾಗಿದ್ದ ಡಾ|| ಸಿದ್ದಯ್ಯ ಪುರಾಣಿಕ್‌ರವರಿಗೆ ಕೊಡಗಿನ ಜನತೆ ತಮ್ಮ ಅಂತಿಮ ನಮನವನ್ನು ಸಲ್ಲಿಸುವುದು ಮಾನವ ಧರ್ಮವಾಗಿದೆ.

"ಕಾವ್ಯಾನಂದ" ಎಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಜನಪ್ರಿಯತೆಗಳಿಸಿದ್ದ ಡಾ|| ಪುರಾಣಿಕರು, ಆಡಳಿತ ಕ್ಷೇತ್ರಕ್ಕಿಂತ ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚಿನ ಸೇವೆ ಸಲ್ಲಿಸಿದ್ದರು. ಈ ಮೂಲಕವೇ ಇವರು ನಾಡಿನ ಜನತೆಗೆ ಹೆಚ್ಚಿನ ಚಿರ-ಪರಿಚಿತರು. 'ಅಜ್ಜನ ಕೋಲಿದು ನನ್ನಯ ಕುದುರೆ' 'ಮೊದಲು ಮಾನವನಾಗು' ಎಂಬ ಇವರ ಕವಿತೆಗಳು ಕನ್ನಡಿಗರೆದೆಯಲ್ಲಿ ಸದಾ ಹಸಿರಾಗಿ ಉಳಿಯುತ್ತವೆ.

ಒಟ್ಟಿನಲ್ಲಿ ತುಂಬು ಹೃದಯದ ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡು, ದಕ್ಷತೆ ...

ಕಾರ್ಯಕರ್ತರಿಗೆ ಕಣ್ಣಿನ ಪಾಯ ದಿನಾಚರಣೆಯನ್ನು ಎಸ್. ಹೆ
ಲಿಗಳು ಮತ್ತು ದೃಷ್ಟಿದೋಷಗಳ ಕಾಲಿ. ಅವರ ಅಧ್ಯಕ್ಷತೆ
ಕುರಿತ ಒಂದು ದಿನದ ತರಬೇತಿ ನಡೆಸಲಾಯಿತು. ಮುಖ್ಯ
ಯನ್ನು ಇತ್ತೀಚೆಗೆ ವಿರಾಜಪೇಟೆ ಗಳಾಗಿ ಎಂ. ಎ. ನೊಹಿದ್ದ
ಪುರಭವನದಲ್ಲಿ ಏರ್ಪಡಿಸಲಾ ಅವರು ಭಾಗವಹಿಸಿದ್ದ
ಗಿತ್ತು. ಕಾರ್ಯಕ್ರಮದ ಅಧ್ಯಕ್ಷ ತಾರಾಬಾಯಿ ಅವರಿಂದ ಪಾ
ತೆಯನ್ನು ಜಿಲ್ಲಾ ಸಹಾಯಕ ನೆಯಾದ ಬಳಿಕ ತಾಲೂ
ಆರೋಗ್ಯಾಧಿಕಾರಿ ಡಾ|| ವಸಂತ ಅವರು ಸ್ವಾಗತಿಸಿದರು.
ಅವರು ವಹಿಸಿದ್ದರು. ನೇತ್ರತಜ್ಞ ಸಲೀಮಾ ಅವರು ಡಾ||ರಾಧಾ
ಡಾ|| ವಿದ್ಯಾಧರ ಅವರು ಶಿಬಿರ ಅವರ ಬಗ್ಗೆ ತಿಳಿಸಿದರು.
ವನ್ನು ನಡೆಸಿ ಕೊಟ್ಟರು. ಸಂಸ್ಥೆಯ ಅವರು ವಂದಿಸಿದರು. ವಿದಾ
ಕಾರ್ಯದರ್ಶಿ ಡಾ|| ಆರ್. ಎಸ್. ಗಳಿಂದ ಸಂಸ್ಥೆತಿಳ ಕಾರ್ಯ

# ಕಾವ್ಯ ಪ್ರಪಂಚ

## ವಚನಾಯನ

(೧)

ಮುಗಿಲಾಳಿಯ ದಾರಿಯಲ್ಲಿ
ಕಂಬನಿ ಕರ ಬರೆಯುತ್ತಲಿದೆ
ನಿರ್ಜನ ಕವನವನ್ನು :
ಬೀಜಗೋಳದ ಹಾಳೆಯಲ್ಲಿ
ಸೃಷ್ಟಿಯ ಕೊಕ್ಕು ಬರೆಯುತ್ತಿದೆ
ನಿಸರ್ಗದ ಚಿತ್ರವನ್ನು :
ಕಾಲ್ಪುರದ ತಾಲ ತರಗಾಲು
ನೂರ ನೂರಾರ ಚಿತ್ರ ಮಾಡುತ್ತಿವೆ
ನಿಸರ್ಗದ ನೃತ್ಯವನ್ನು :
ಸ್ವತಂತ್ರ ಧೀರ ಸಿದ್ಧೇಶ್ವರನ ಮುಂದೆ
ಸಿದ್ಧಯ್ಯ ಪುರಾಣಿಕ ಮಾಡುತ್ತಲಿದ್ದಾನೆ
ದಂಡಾದ ರಕ್ಷಣೆಯನ್ನು !

(೨)

ಕತ್ತಲೆಯನ್ನು ಓಡಿಸಲು ಬಂದೂಕವೇಕಣ್ಣ ?
ಒಂದು ದೀಪ ಸಾಕಣ್ಣ !
ಚಳಿಯನ್ನು ಓಡಿಸಲು ಸಿಡಿ ಬಾಂಬು ಏಕಣ್ಣ ?
ಅಗ್ಗಿಷ್ಟಿಗೆ ಸಾಕಣ್ಣ !
ವೈರವನ್ನು ಓಡಿಸಲು ಅಸ್ತ್ರ ಶಸ್ತ್ರಗಳೇಕಣ್ಣ ?
ನಿಷ್ಕಾಮ ಭಾವ ಸಾಕಣ್ಣ!
ಸ್ವತಂತ್ರಧೀರ ಸಿದ್ಧೇಶ್ವರನನ್ನೊಲಿಸಲು ಅವಾಚಿ ಈ ಜಾತಿಯೇಕಣ್ಣ ?
ಮಾನವ ಪ್ರೀತಿ ಸಾಕಣ್ಣ

(೩)

ಕೃಷ್ಣ ಬಲರಾಮರ ಕೈಗಳಲ್ಲಿ ಇದ್ದಾಗಲೂ
ಚಕ್ರ ಹಾಲಗಳು ಸುಖಾರಿಸಲಿಲ್ಲ !
ಈಗ ಉದ್ಧಮಾಡಿ ಒಕ್ಕರಿಗರ ಕೈಗಳಲ್ಲಿದ್ದು
ಸುಖಾರಿಯಾಯಾನೇನಯ್ಯ
ಸುಖಾರಿಯಾದರೆ
ಆಗ ಹಾವಿನಂಟು ಆತ್ಮೋಜ್ಜೀವಿ ಸ್ವಸ್ಥ ಸಂಸಾರ
ಈಗ ಕೊಂಡಾರಯ ರಾಕ್ಷಸ ವ್ಯವಹಾರ
ತಪ್ಪುತ್ತಿರಲಿಲ್ಲವೇನಯ್ಯ
ಸ್ವತಂತ್ರ ಧೀರ ಸಿದ್ಧೇಶ್ವರಾ ?

(೪)

ಹೂವಿನ ಕೋಮಲತೆ
ಇಬ್ಬನಿಯ ನಿರ್ಮಲತೆ
ಜೇನಿನ ಮಧುರತೆ
ಮಾಗಿಯ ಮುಗ್ಧತೆ
ಸಾಗರದ ಸುಂದರತೆ
ಹಿಮಗಿರಿಯ ಬಂಧುರತೆ
ಇವೆಲ್ಲ ಸೇರಿ
ಸ್ವತಂತ್ರ ಧೀರ ಸಿದ್ಧೇಶ್ವರ
ನಿಬ್ಬೆರಗಾದ ನಮಗೆ

(೫)

ಮಹಾವೀರನ ಅಹಿಂಸೆ
ಬುದ್ಧನ ನೀತಿ
ಕೃಷ್ಣನ ಗೀತೆ
ಏಸುವಿನ ಕರುಣೆ - ದಯೆ
ಬಾಪು - ಬಾಬಾರವರು ಆಂತರ್ಯದಾಯ
ಭಾರತೀಯರಾದ ನಮ್ಮಾಗಾಗಲಿಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

ಡಾ. ಸಿದ್ಧಯ್ಯ ಪುರಾಣಿಕ

# ಸಿದ್ಧಯ್ಯ ಪುರಾಣಿಕ: ಆಶಾವಾದಿ ಕವಿ

ಒಂದನೇ ಪುಟದಿಂದ

ವಚನಗಳು ಧರ್ಮ ನಿರೂಪಣೆಗಾಗಿ ಮೂಡಿದ ಸಾಹಿತ್ಯ ಪ್ರಕಾರವೊಂದಾಗಿ 'ವಚನ' ಮೂಡಿದ್ದನ್ನು ಸೂಚಿಸುತ್ತವೆ; ಹನ್ನೆರಡನೆಯ ಶತಮಾನದ ಬದುಕಿನ ಆಗತ್ಯಗಳು ಮತ್ತು ಜವಾಬ್ದಾರಿಗಳು ಅದೇ ಪ್ರಮಾಣದಲ್ಲಿ ಕಾಣಬರುವುದಿಲ್ಲ.

ಆಧುನಿಕರು ಬರೆಯುತ್ತಿರುವ ವಚನಗಳೂ ಇದೇ ರೀತಿ: ಇಲ್ಲಿ 'ವಚನ' ಒಂದು ಸಾಹಿತ್ಯ ಪ್ರಕಾರ ಮಾತ್ರವಾಗಿ ಬಳಕೆಯಾಗುತ್ತಿದೆ ಎಂಬುದನ್ನು ಈ ಅವಗಣೆ ಸೂಚಿಸುತ್ತಿದೆಯೇನೋ ಎಂಬುದು ನನ್ನ ಭಾವನೆ. ಈ ಅಭಿಪ್ರಾಯವನ್ನು ಡಾ. ಸಿದ್ಧಯ್ಯ ಪುರಾಣಿಕರ ಮುಂದಿಟ್ಟಾಗ ಅವರ ಉತ್ತರ ಒಂದು ಮುಗುಳ್ನಗೆ ಮಾತ್ರವಾಗಿತ್ತು.

### ಆಧುನಿಕ ವಚನಕಾರ

ಆಧುನಿಕ ವಚನಕಾರರಲ್ಲಿ ಎಸ್.ವಿ. ರಂಗಣ್ಣ, ಎಸ್.ವಿ. ಪರಮೇಶ್ವರ ಭಟ್ಟ- ಹೀಗೆ ಹೆಸರುಗಳ ಪಟ್ಟಿ ಬೆಳೆಯುತ್ತಲೇ ಹೋದರೂ ಸಿದ್ಧಯ್ಯ ಪುರಾಣಿಕರ ಪ್ರತಿಭೆಗೆ ವಚನ ಒಂದು ಒಳ್ಳೆಯ ಮಾಧ್ಯಮವಾಗಿ ಅವರನ್ನು ಆಧುನಿಕ ವಚನಕಾರರಲ್ಲಿ ಪ್ರಮುಖರಾದ ಕೆಲವೇ ಗಣ್ಯರಲ್ಲಿ ಒಬ್ಬರನ್ನಾಗಿ ಮಾಡಿದೆ. ಉದಾಹರಣೆಯಾಗಿ ಈ ಎರಡು ವಚನಗಳನ್ನು ಗಮನಿಸಿ:

*ಫಲವಿತ್ತ ರೆಂಬೆ ಬಾಗುತ್ತದೆ*
*ಗೊನೆ ಹೊತ್ತ ಬಾಳೆ ಬಾಗುತ್ತದೆ*
*ತೆನೆ ಹೆತ್ತ ದಂಟು ಬಾಗುತ್ತದೆ*
*ಏನೇನೋ ಇಲ್ಲದುದು*
*ಬೀಗುತ್ತದೆ ನೋಡಾ- ಸ್ವತಂತ್ರ ಧೀರ ಸಿದ್ಧೇಶ್ವರಾ*

•

*ವಿದ್ಯೆ ಬಂತು, ವಿನಯ ಹೋಯ್ತು;*
*ಬುದ್ಧಿ ಬಂತು, ಶ್ರದ್ಧೆ ಹೋಯ್ತು;*
*ಶ್ರದ್ಧೆ ಬಂತು, ವಿವೇಚನೆ ಹೋಯ್ತು;*
*ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು;*
*ವಿಜ್ಞಾನ ಬಂತು, ಸಮಾಧಾನ ಹೋಯ್ತು;*
*ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು;*
*ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು;*
*ಬೋಧನೆ ಬಂತು, ಸಾಧನೆ ಹೋಯ್ತು;*
*ಮಾತು ಬಂತು, ಕೃತಿಯು ಹೋಯ್ತು;*
*ಜಾತಿ ಬಂತು, ಪ್ರೀತಿ ಹೋಯ್ತು;*
*ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು*
*ಸಿದ್ಧಯ್ಯ ಪುರಾಣಿಕ ಬಂದ,*
*ಸ್ವತಂತ್ರ ಧೀರ ಸಿದ್ಧೇಶ್ವರ ಹೋದ!*

ಮೊದಲ ವಚನದ ಶಿಲ್ಪ ಸುಂದರವಾದ ಮುಕ್ತಕದಂತಿದೆ. ಒಂದು ಪದ ಕೂಡ ಹೆಚ್ಚು ಕಮ್ಮಿ ಆಗದಂಥ ಅಭಿವ್ಯಕ್ತಿ. choicest words in the choicest order ಇದ್ದ ಹಾಗೆ. ಸಮೃದ್ಧಿಗೂ ಒಣ ಜಂಬದ ಬೊಳ್ಳುತನಕ್ಕೂ ಇರುವ ವ್ಯತ್ಯಾಸವನ್ನು ಕಾವ್ಯಮಯವಾಗಿಸಿದ ವಚನ.

ಎರಡನೆಯ ವಚನದಲ್ಲಿ ಬಳಸಿಕೊಂಡಿರುವ ತಂತ್ರಜ್ಞಾನ ಪದದ್ದು. ಆದರೆ ಸಿದ್ಧಿ ಮಾತ್ರ ಪೂರ್ಣವಾಗಿ ಸಿದ್ಧಯ್ಯ ಪುರಾಣಿಕರದು. ಆಧುನಿಕ ವಚನಗಳಿಗೆ ಭಿನ್ನಭಿನ್ನ ತಂತ್ರಗಳ ಅಭಿವ್ಯಕ್ತಿಯನ್ನೊದಗಿಸಿದವರಲ್ಲಿ ಮೊದಲಿಗರು ಎಸ್.ವಿ. ರಂಗಣ್ಣನವರೆಂಬುದನ್ನು ಮರೆಯದೆಯೇ ಸಿದ್ಧಯ್ಯನವರ ಗೆಲುವನ್ನು ಗಮನಿಸಬಹುದು. ಮೂರು, ನಾಲ್ಕು, ಎಂಟು ಮತ್ತು ಹತ್ತನೆ ಸಾಲುಗಳಿಂದ ಶಿಲ್ಪ ಸ್ವಲ್ಪ ಸಡಿಲವಾಯಿತೆನ್ನಿಸಬಹುದು. ವಸ್ತುವಿಗೆ ಸಮಕಾಲೀನತೆಯನ್ನು ಹಾಗೂ ಸಂಕೀರ್ಣತೆಯನ್ನು ತರುವ ಯತ್ನದಿಂದಾಗಿ.

ಆಧುನಿಕ ವಚನ ಪ್ರಕಾರ ಸಿದ್ಧಯ್ಯ ಪುರಾಣಿಕರ ಪ್ರತಿಭೆಗೆ ಹೇಳಿ ಮಾಡಿಸಿದ್ದೆನ್ನಬಹುದು. ಇಲ್ಲಿಯ ಎಲ್ಲ ವಚನಗಳ ಗುಣಮಟ್ಟವೂ ಹೀಗೆಯೇ ಎತ್ತರದ್ದಾಗದಿದ್ದರೂ ಕನ್ನಡ ಭಾಷೆಯ ವಿಶಿಷ್ಟ ಪ್ರಕಾರವೊಂದನ್ನು ಭಾರತೀಯರಿಗೆ ಪರಿಚಯ ಮಾಡಿಸಿದ ಹೆಗ್ಗಳಿಕೆಯುಂಟೂ ಈ ಕೃತಿಗಿದೆ. ಅವರ ಎರಡನೆಯ ವಚನ ಸಂಕಲನ- ವಚನ ನಂದನ. ಅದನ್ನು ಸಿದ್ಧಗಂಗಾ ಮಠದ ಡಾ. ಶಿವಕುಮಾರ ಸ್ವಾಮಿಗಳಿಗರ್ಪಿಸಿದ್ದಾರೆ. 475 ರಚನೆಗಳನ್ನೊಳಗೊಂಡಿರುವ ಇಲ್ಲಿಯ ಹೆಚ್ಚಿನ ವಚನಗಳು ಛಂದೋಬದ್ಧವಾಗಲು ಹೋಗುತ್ತ ವಚನಗಳ ಮೂಲ ಸ್ವರೂಪದಿಂದ ಭಿನ್ನವಾಗಿ ಬಿಡುತ್ತವೆ. ಸಿದ್ಧಯ್ಯ ಪುರಾಣಿಕರ ಪ್ರತಿಭೆಯ ಯಶಸ್ಸನ್ನು ಕಾಣಬೇಕಾದರೆ ವಚನೋದ್ಯಾನಕ್ಕೇ ಹೋಗಬೇಕು. ಮೊದಲ ಸಂಕಲನದ ಪ್ರತಿಭೆಯ ಕಾವು ಇಲ್ಲಿಲ್ಲ.

### ನವೋದಯ ಮಾದರಿಗಳು

ಸಿದ್ಧಯ್ಯ ಪುರಾಣಿಕರ ಆರು ಕವನ ಸಂಕಲನಗಳು ಪ್ರಕಟವಾಗಿವೆ. ತಮ್ಮ ಗೇಯತೆಯ ಸೊಗಸಿನಿಂದ, ಭಾವನೆಗಳ ಹೊಸತನದಿಂದ ಅವು ನಮ್ಮ ಗಮನವನ್ನು ಸೆಳೆಯುತ್ತವೆ. ಮೊದಲು ಮಾನವನಾಗು, ಅವಿಭಕ್ತಂ ವಿಭಕ್ತೇಷು, ಇಂಥ ಕವಿತೆಗಳ ಜನಪ್ರಿಯತೆ ಯಾವ ಕವಿಯನ್ನಾದರೂ ಪುಲಕಗೊಳಿಸುವಂಥದ್ದು. ನವೋದಯದ ಆರಂಭ ಕಾಲದ ಕವಿತೆಗಳ ಸುಂದರವಾದ ಮಾದರಿಗಳನ್ನು ಇವರ ಕವಿತೆಗಳಲ್ಲಿ ಗುರುತಿಸಬಹುದು. ಈ ಸಾಲುಗಳನ್ನು ಗಮನಿಸಿ.

*ಮಾನವರು ಕೆಟ್ಟಾರು! ಮಾನವತೆಯುಳಿದೀತು!*
*ಕವಿ ದೇಹ ಬಿಟ್ಟಾನು! ಕವಿತೆಯುಳಿದೀತು!*
*ಕೃತಿಗಳಿಯದಿದ್ದರೂ! ಕನಸೊಂದು ಉಳಿದೀತು!*
*ಅದನುಂಡ ಬಳಲಿರುವ ಮನಸು ಬೆಳೆದೀತು!*

ಈ ಸಾಲುಗಳು ಅವರ ಕವಿತೆಗಳ ಒಂದು ಸುಂದರ ಮಾದರಿಯಾಗಿವೆಯೆನ್ನಬಹುದು.

ನಮ್ಮಲ್ಲಿ ಬಡವಾಗಿರುವ ಕ್ಷೇತ್ರಗಳಲ್ಲಿ ಒಂದು ಸುಂದರ ಮಾದರಿಯಾಗಿವೆಯೆನ್ನಬಹುದು. ಸಿದ್ಧಯ್ಯ ಪುರಾಣಿಕರು ಈ ಕ್ಷೇತ್ರದಲ್ಲಿ ಸಾಕಷ್ಟು ಪರಿಶ್ರಮ ಮಾಡಿದ್ದಾರೆ. ಅವರ ಒಟ್ಟು ಆರು ಸಂಕಲನಗಳಲ್ಲಿ 'ತುಪ್ಪಾ ರೊಟ್ಟೀ ಗೇಗೇಗೇ'- ಭಾರತ ಸರ್ಕಾರದ ಪ್ರಶಸ್ತಿ ಪಡೆದಿದೆ. 'ಅಜ್ಜನ ಕೋಲಿದು ನನ್ನಯ ಕುದುರೆ'ಯಂಥ ಅನೇಕ ಶಿಶುಪ್ರಿಯ ಗೀತೆಗಳನ್ನು ಅವರು ನೀಡಿದ್ದಾರೆ. ಮಕ್ಕಳ ಅನುಭವದ ವಲಯದಲ್ಲಿ ವಿಹರಿಸಿದ್ದಾರೆ. ಎರಡು ಕಥಾ ಸಂಗ್ರಹಗಳನ್ನೂ ಒಂದು ಕಾದಂಬರಿಯನ್ನೂ ನೀಡಿದ್ದಾರೆ. ಬಸವಣ್ಣನವರ ಜೀವನ ಮತ್ತು ಸಂದೇಶ, ಮಹದೇವಿ, ಹರ್ಡೇಕರ್ ಮಂಜಪ್ಪ, ಸಿದ್ಧರಾಮ, ಮಿರ್ಜಾ ಗಾಲಿಬ್ ಎಂಬ ಐದು ಜೀವನ ಚರಿತ್ರೆಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಮೊದಲ ನಾಲ್ಕು ಶರಣರನ್ನು ಕುರಿತವು; ಸಿದ್ಧಯ್ಯನವರ ಒಲವನ್ನು ಸೂಚಿಸಬಲ್ಲವು. ಅಷ್ಟು ಕಟ್ಟಾದ ಜೀವನ ಚಿತ್ರಗಳು ಇವು. ಬಸವಣ್ಣನವರ ಜೀವನ ಮತ್ತು ಸಂದೇಶ ಕೃತಿ- ಗಮನಾರ್ಹವಾಗುತ್ತದೆ- ನಿರೂಪಣಾ ಕ್ರಮದಿಂದ.

'ಡಾ. ಸಿದ್ಧಯ್ಯ ಪುರಾಣಿಕರು ಕನ್ನಡದ ಹಿತದ ವಿಷಯದಲ್ಲಿ ಸದಾ ಜಾಗರೂಕರಾಗಿದ್ದವರು. ಎಪ್ಪತ್ತೇಳು ವರ್ಷಗಳ ತುಂಬು ಜೀವನದಲ್ಲಿ ಅವರು ಪಡೆದ ಮನ್ನಣೆ ಗೌರವಗಳು ಬಹಳ. ಅವುಗಳಲ್ಲಿ ಮುಖ್ಯವಾದುವು- ಗುಲಬರ್ಗಾದಲ್ಲಿ ನಡೆದ 58 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ; ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದ್ದು.

ತಮ್ಮ ಗೃಹಿಣಿಯ ತೀವ್ರ ಅಸ್ವಸ್ಥತೆ, ತಮ್ಮ ಆರೋಗ್ಯದ ಅಭಾವದ ಸಂಕಟದ ಸ್ಥಿತಿಗಳ ಮಧ್ಯೆಯೂ ಅಲಿ ಅಸ್ಗರ್ ರಸ್ತೆಯಲ್ಲಿರುವ ಅವರ ಮನೆಯಲ್ಲಿ ಕನ್ನಡದ ಹಿತದ ಚಿಂತನ ನಡೆಯುತ್ತಿತ್ತು. ಸಾಹಿತಿಗಳ ಕೂಟ ಆಗಾಗ ಸೇರುತ್ತಿತ್ತು; ಚಿಂತನ- ಮಂಥನ ನಡೆಯುತ್ತಿತ್ತು. ಹೊಸ ಪುಸ್ತಕಗಳನ್ನೋದುವ ಹವಿವಾ ವಿಪುಲವಾಗಿತ್ತು. ಇನ್ನವು ಇಲ್ಲ ಎಂಬುದು ನೋವಿನ ಸಂಗತಿಯಲ್ಲವೆ?

ಪ್ರಜಾವಾಣಿ 18 Sept 94.

PUB : PRAPANCHA
DATE : 18/9/94.
NEWS ITEM : KAVYA PRAPANCHA

ಪ್ರಜಾವಾಣಿ ೧೮ ಸೆಪ್ಟೆಂಬರ್

# ಸಿದ್ಧಯ್ಯ ಪುರಾಣಿಕ:

## ದಕ್ಷ ಅಧಿಕಾರಿ, ಆಶಾವಾದಿ ಕವಿ

**ಸರ್ಕಾರಿ ಸೇವೆಯ ಜತೆಯಲ್ಲೇ ಸಾಹಿತ್ಯಸೇವೆಯನ್ನೂ ನಡೆಸಿದ ಸಿದ್ಧಯ್ಯ ಪುರಾಣಿಕರು ಎರಡೂ ಕ್ಷೇತ್ರಗಳಲ್ಲಿ ಸಮರ್ಥರೆನಿಸಿಕೊಂಡವರು. ಅವರ ಸೇವಾವಧಿ ಕೇವಲ ನೌಕರಿಯ ಅಥವಾ ಅಧಿಕಾರದ ಅವಧಿಯಾಗದೆ ಅವರ ಕಾವ್ಯಜೀವನಕ್ಕೂ ಪ್ರೇರಣೆ ನೀಡುವ ಅನುಭವದ ಕ್ಷೇತ್ರವಾದ್ದರಿಂದ ಅವರು ದಕ್ಷ ಅಧಿಕಾರಿಯಾಗಿ, ಉತ್ತಮ ಸಾಹಿತಿಯಾಗಿ ಇಂದಿಗೂ ಸ್ಮರಣೀಯರು.**

**ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ**

ಇತ್ತೀಚೆಗೆ ಡಾ. ಸಿದ್ಧಯ್ಯ ಪುರಾಣಿಕರ ಆರೋಗ್ಯ ಅಷ್ಟೇನೂ ಚೆನ್ನಾಗಿರಲಿಲ್ಲ. ನಡುವಯಸ್ಸಿನ ಸಮಸ್ಯೆಯಿಂದ ಬೇಸರಿಸಿಕೊಳ್ಳುತ್ತಿದ್ದರು. ಇತ್ತೀಚೆ ಆರೋಗ್ಯದ ಕೊರತೆಯಾದಾಗ ಮಿತ್ರರೊಬ್ಬರು ಬಂದು ಹೇಗಿದ್ದೀರಾ ಎಂದು ಪ್ರಶ್ನಿಸಿದಾಗ ಅವರು ಹೇಳಿದ್ದೇನು ಗೊತ್ತೇ?.... ನಮ್ಮ ಹತ್ತನೆ ಕಾಲ ಮುಗಿಯಿತು'. ಜೊತೆಗೆ 'ಈಗೇನಿದ್ದರೂ Spare parts ಕಾಲ' ಎಂದು ಮುಗುಳು ನಗುತ್ತ ಹೇಳಿದರು. ಕಟ್ಟಿಸಿಕೊಂಡ ಹಲ್ಲುಗಳು, ಧರಿಸುತ್ತಿರುವ ಕನ್ನಡಕಗಳು, ಕಿವಿಗಳ ತೊಂದರೆಗೆಂದು ಪಡೆದ ವಿಶೇಷ ಸೂಚನೆಗಳು- ಇವನ್ನೆಲ್ಲ ವಿನೋದವಾಗಿ ನೆನಪಿಸಿಕೊಳ್ಳುತ್ತಿದ್ದರು. ಅವರ ಎದುರಿಗೆ ಅಸ್ವಸ್ಥರಾಗಿದ್ದ ಅವರ ಶ್ರೀಮತಿಯವರು ಮೌನವಾಗಿ ಕುಳಿತಿದ್ದರು.

ಸಾಹಿತ್ಯ ಹಾಗೂ ಕನ್ನಡದ ವಿಷಯಗಳಲ್ಲಿ ಕೊನೆಯವರೆಗಿನ ಆಸಕ್ತಿ, ತಲ್ಲೀನತೆಗಳು ಅವರವು.

ರಾಯಚೂರು ಜಿಲ್ಲೆ- ಯಲಬುರ್ಗಿ ತಾಲ್ಲೂಕಿನ ದ್ಯಾಂಪುರದಲ್ಲಿ 18.6.1918 ರಲ್ಲಿ ಜನಿಸಿದ ಇವರು 4.9.1994 ರಂದು ಮಧ್ಯರಾತ್ರಿಯಲ್ಲಿ ಕೊನೆಯುಸಿರೆಳೆಯುವವರೆಗೆ ಕ್ರಮಿಸಿದ ಹಾದಿ ಪೂರ್ಣವಾಗಿ ಯಶಸ್ಸಿನ ಕಥೆಯೇನೂ ಅಲ್ಲ.

ಹಳ್ಳಿಯ ಬಡ ಕುಟುಂಬದಲ್ಲಿ ಜನಿಸಿದರೂ ಅವರ ವ್ಯಕ್ತಿತ್ವ ಧನ್ಯವಾಗಲು ಮನೆಯ ವಾತಾವರಣವೇ ಅಲ್ಲದೆ ಸಂಕಲ್ಪ ಹಾಗೂ ಸಾಧನೆಗಳೂ ಕಾರಣ ಎನ್ನಬಹುದೇನೋ.

ಶಾಲೆಯಲ್ಲಿ ಒಂದು ದಿನ ಅವರ ಗುರುಗಳು ತಮ್ಮ ಎದುರಿಗೆ ಕುಳಿತಿದ್ದ ವಿದ್ಯಾರ್ಥಿಗಳಿಗೆಲ್ಲ ಒಂದು ಸವಾಲೆಸೆದರು- ನಿಮಗೇನು ಬೇಕು ಎಂಬುದನ್ನು ಸ್ಲೇಟಿನಲ್ಲಿ ಬರೆದು ತನ್ನಿ ಎಂದು. ಒಬ್ಬ ವಿದ್ಯಾರ್ಥಿ ಪೆಪ್ಪರುಮೆಂಟು ಎಂದಿದ್ದರೆ ಮತ್ತೊಬ್ಬ ಊಟ. ಇನ್ನೊಬ್ಬ ದುಡ್ಡು- ಹೀಗೆ ತಮ್ಮ ತಮ್ಮ ಬಯಕೆಗಳನ್ನು ಬರೆದು ತಂದಿಟ್ಟರು. ಅವರಲ್ಲಿ ಒಬ್ಬ ವಿದ್ಯಾರ್ಥಿ ಬರೆದಿದ್ದ ಉತ್ತರ ಅವರ ಹುಬ್ಬುಗಳು ಮೇಲೇರುವಂತೆ ಮಾಡಿದವು. ಆ ವಿದ್ಯಾರ್ಥಿ ನನಗೆ 'ವಿದ್ಯೆ ಬೇಕು' ಎಂದು ಬರೆದಿದ್ದ. ಆ ವಿದ್ಯಾರ್ಥಿಯೇ ಮುಂದೆ ಡಾ. ಸಿದ್ಧಯ್ಯ ಪುರಾಣಿಕ, ಐ.ಎ.ಎಸ್ ಎಂದೂ ಸಾಹಿತಿಗಳೆಂದೂ ಖ್ಯಾತರಾದರು.

ಉರ್ದು, ಹಿಂದಿ, ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆ ಹಾಗೂ ಸಾಹಿತ್ಯಗಳನ್ನು ಆಳವಾಗಿ ಅಧ್ಯಯನ ಮಾಡಿದ ಸಿದ್ಧಯ್ಯ ಪುರಾಣಿಕರು ವಿದ್ವಾಂಸರೂ ವಿನಯಿಗಳೂ ಆಗಿ ಬೆಳೆದರು.

ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಪದವೀಧರರಾಗಿ, 1943 ರಲ್ಲಿ ತಹಸೀಲ್ದಾರರಾಗಿ ಆಯ್ಕೆಗೊಂಡರು. ಅನೇಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಕಾರ್ಮಿಕ ಕಮಿಷನರ್ ಆಗಿ ಸೇವೆಯಿಂದ ನಿವೃತ್ತರಾದರೂ ಅವರ ಪ್ರವೃತ್ತಿ ಮಾತ್ರ ಕನ್ನಡ ಹಾಗೂ ಶರಣರು ಮತ್ತು ಶರಣರ ಸಾಹಿತ್ಯದಲ್ಲಿಯೇ ಅವರನ್ನು ಕೊನೆಯ ದಿನಗಳವರೆಗೂ ಕ್ರಿಯಾಶೀಲರನ್ನಾಗಿಸಿತ್ತು.

### ಅಧಿಕಾರ-ಕಾವ್ಯಜೀವನ


ಅವರ ಸೇವಾವಧಿ ಕೇವಲ ನೌಕರಿಯ ಅಥವಾ ಅಧಿಕಾರದ ಅವಧಿಯಾಗದೆ ಅವರ ಕಾವ್ಯ ಜೀವನಕ್ಕೂ ಪ್ರೇರಣೆ ನೀಡುವ ಅನುಭವದ ಕ್ಷೇತ್ರವಾದದ್ದರಿಂದಲೇ ಅವರು ಸಲ್ಲಿಸಿದ ಸೇವೆ ಇಂದಿಗೂ ಸ್ಮರಣೀಯವಾಗಿರುವುದು.

ಕನ್ನಡವನ್ನು ಕುರಿತ ಅವರ ಆಸಕ್ತಿ, ನಿಷ್ಠೆ ಮೊನ್ನೆಯದಲ್ಲ. ಹೈದರಾಬಾದ್ ಪ್ರಾಂತದಲ್ಲಿದ್ದ ಕನ್ನಡಿಗರ ಬವಣೆಗಳನ್ನು ಆಳವಾಗಿ ಅರಿತಿದ್ದ ಅವರು ಕನ್ನಡದ ಹೋರಾಟದ ಕಡೆಗೆ ಹೊರಳಿದ್ದು ಆಶ್ಚರ್ಯದ ಸಂಗತಿಯಲ್ಲ. ಕನ್ನಡ ಅವರಿಗೆ ಸಾಹಿತ್ಯದ ಭಾಷೆಯಷ್ಟೇ ಆಗಿರದೆ ಅದನ್ನಾಡುವ ಜನಾಂಗದ ಬದುಕೂ ಆಗಿದ್ದುದು ಕನ್ನಡಿಗರ ಸಮಸ್ಯೆಗಳನ್ನರಿಯುವ ಅವಕಾಶಗಳನ್ನು ತೆರೆಯಿತು. ಹೈದರಾಬಾದ್ ಕನ್ನಡಿಗರ ಕನ್ನಡ ಸಾಹಿತ್ಯ ಪರಿಷತ್ತನ್ನು ಹಿರಿಯರಾದ ಮಾನ್ವಿ ನರಸಿಂಗರಾವ್ ಮತ್ತಿತರರೊಂದಿಗೆ ಹುಟ್ಟು ಹಾಕಿಕೊಂಡು ಭಾಷಾವಾರು ಪ್ರಾಂತಗಳು ರೂಪುಗೊಳ್ಳುವವರೆಗೂ ದುಡಿದ ಸಿದ್ಧಯ್ಯ ಪುರಾಣಿಕರು ಹೇಳುವ ಈ ಮಾತನ್ನು ಗಮನಿಸಿ.

'ಕರ್ನಾಟಕವು ಕನ್ನಡಿಗರ ನಿರ್ಲಕ್ಷ್ಯದಿಂದ, ಕನ್ನಡ ನಾಯಕರ ನಪುಂಸಕತೆಯಿಂದ ನೆರೆಹೊರೆಯ ಭಾಷೆಗಳ ಬಕಾಸುರತೆಯಿಂದ ಕಳೆದುಕೊಂಡ ಭಾಗಗಳಿಗೆ ಲೆಕ್ಕವಿದೆಯೆ?'

ಕರ್ನಾಟಕ ಕಳೆದುಕೊಂಡಿರುವ ಮಡಕಶಿರ, ಶಾಳವಾಡಿ, ಅಕ್ಕಲಕೋಟೆ, ಕಾಸರಗೋಡು, ಸೊಲ್ಲಾಪುರ ಮುಂತಾದ ಭಾಗಗಳ ವಿಷಯಗಳಿಗೇ ಅಲ್ಲದೆ ಇಂದಿನ ಕನ್ನಡಿಗರ ಸಮಸ್ಯೆಗಳಿಗೆ ಕಾರಣವೇನು ಎಂಬುದನ್ನೂ ಮೇಲಿನ ಮಾತು ವಿಶದಪಡಿಸುತ್ತದೆ.

ತಮ್ಮ ವೃತ್ತಿಯ ಜೊತೆಗೆ ಸೇವೆಯಲ್ಲಿದ್ದಾಗಲೇ



ಅವರು ಮೈಸೂರು ವಿಶ್ವವಿದ್ಯಾಲಯದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ಯೋಜನೆಗಳಿಗೆ ಒಂದು ನಿರ್ದಿಷ್ಟ ರೂಪು ಕೊಡುವ ಸುಸಂಧಿಯನ್ನು ಪಡೆದಿದ್ದರು. ಅವುಗಳನ್ನೆ ಅಲ್ಲದೆ ಇನ್ನೂ ಹಲವು ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಸ್ಮರಣೀಯರಾದರು. ಆಡಳಿತಾಂಗದಲ್ಲಿ ಕನ್ನಡದ ಹಿತಕ್ಕೆ ಧಕ್ಕೆಯಾಗದಂತೆ ದುಡಿದರು. ಅವರ ಈ ಕನ್ನಡ ಪರ ನಿಲುವನ್ನು ಮೆಚ್ಚಿಯೇ ಸರ್ಕಾರ ನಿವೃತ್ತಿಯ ಅನಂತರ ಕನ್ನಡ ಮತ್ತು ಕನ್ನಡಿಗರ ಹಿತಕ್ಕೆ ಸಂಬಂಧಿಸಿದ ಡಾ. ಸರೋಜಿನಿ ಮಹಿಷಿ ಸಮಿತಿ, ಕನ್ನಡ ಗಡಿ ಸಮಿತಿ, ಕನ್ನಡ ಪ್ರಾಧಿಕಾರಗಳ ಸದಸ್ಯರನ್ನಾಗಿ ಮಾಡಿತು. ಅವರು ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡುದೇ ಅಲ್ಲದೆ ಲೋಕ ಸೇವಾ ಆಯೋಗದ ಎದುರು ಡಾ. ದೇ.ಜ.ಗೌ. ಅವರೊಂದಿಗೆ ನಿರಶನ ಸತ್ಯಾಗ್ರಹವನ್ನು ಮಾಡಿದರು. ಆಡಳಿತಾಂಗದಲ್ಲಿ ಕನ್ನಡದ ಹಿತಕ್ಕೆ ಧಕ್ಕೆಯಾಗದಂತೆ ದುಡಿದರು. ಕನ್ನಡ ಕ್ರೈಸ್ತರ ಸಮಸ್ಯೆ ಆಗಲಿ, ಕಾವೇರಿ - ಕೃಷ್ಣಾ ಜಲವಿವಾದ ಆಗಲಿ, ಕಾರ್ಖಾನೆಗಳ ಕನ್ನಡಿಗರ ಸಮಸ್ಯೆಗಳೇ ಆಗಲಿ ಅವರು ಯಾವಾಗಲೂ ಸಶಕ್ತವಾಗಿ ಸ್ಪಂದಿಸುತ್ತಿದ್ದರು. ಕನ್ನಡದ ಹಿತಚಿಂತಕರಾಗಿದ್ದರು.

### ಬಹುಭಾಷಾ ವಿದ್ವಾಂಸ

ಬಹುಭಾಷಾ ವಿದ್ವಾಂಸರಾಗಿದ್ದ ಡಾ. ಸಿದ್ಧಯ್ಯ ಪುರಾಣಿಕರು ಉದ್ದಾಮ ವಾಗ್ಮಿಗಳಾಗಿದ್ದರು. ಆಳವಾದ ಅನುಭವ, ಮಾಗಿದ ವಿದ್ವತ್ತು, ವಿನ್ಯಾಸವೂ ಸೇರಿ ಅವರ ಭಾಷಣಗಳು ತುಂಬ ಪರಿಣಾಮಕಾರಿಯಾಗಿರುತ್ತಿದ್ದವು. ಒಂದೊಂದು ಭಾಷಣಕ್ಕೂ ಅವರು ನಡೆಸುತ್ತಿದ್ದ ಅಧ್ಯಯನ ಅವರ ಮಾತುಗಳನ್ನು ಮನನ ಯೋಗ್ಯವಾಗುವಂತೆ ಮಾಡುತ್ತಿತ್ತು. ಇತ್ತೀಚೆಗೆ ನಿಧಾನವಾಗಿ ಕಣ್ಮರೆಯಾಗುತ್ತಿರುವ ವಾಗ್ಮಿತೆಯ ಒಂದು ಶಕ್ತಿಯನ್ನವರು ಪಡೆದಿದ್ದರು.

ಪಿತ್ರಾರ್ಜಿತವಾಗಿ ಬಂದಿದ್ದ ಕಾವ್ಯಾಧ್ಯಯನ ಹಾಗೂ ಕಾವ್ಯ ರಚನೆ, ಲೋಕಾನುಭವ- ಇವುಗಳ ಜೊತೆ ಜೊತೆಗೆ ಅವರ ಮನಸ್ಸು ಶರಣರು ಮತ್ತು ಶರಣರ ಸಾಹಿತ್ಯಗಳಲ್ಲಿ ತನ್ಮಯವಾಗಿತ್ತು. ದಶಕಕ್ಕೂ ಹೆಚ್ಚು ಕಾಲ ಪ್ರಧಾನ ಸಂಪಾದಕರಾಗಿ ಅವರು ಸಂಪಾದಿಸಿದ ಬಸವಪಥ ಹಾಗೂ Basava Journal ಗಳನ್ನು ಗಮನಿಸದಿರುವುದು ಸಾಧ್ಯವೇ ಇಲ್ಲ. ಅದರಲ್ಲೂ ಅವರು ಪೂರ್ಣಗೊಳಿಸಲಾಗದೆ ಹೋದ ಅಲ್ಲಮನ ವಚನಗಳ ಇಂಗ್ಲಿಷ್ ಅನುವಾದಕ್ಕಾಗಿ Basava Journal ಇಂದಿಗೂ ಗಮನಾರ್ಹವಾಗಿದೆ.

ಶರಣರ ಸಾಹಿತ್ಯ ಅವರ ವ್ಯಕ್ತಿತ್ವವನ್ನು ಎಷ್ಟು ಗಾಢವಾಗಿ ಆವರಿಸಿತ್ತೆಂಬುದಕ್ಕೆ ಅವರ ಶರಣ ಚರಿತಾಮೃತ, ಎರಡು ಸಂಕಲನಗಳು ಹಾಗೂ ಶರಣರನ್ನು ಕುರಿತ ಜೀವನ ಚರಿತ್ರೆಗಳು ನಿದರ್ಶನವಾಗಿವೆ.

ವಯಸ್ಕರ ಶಿಕ್ಷಣ ಸಂಸ್ಥೆಯಿಂದ ಪ್ರಕಟಗೊಂಡ ಶರಣ ಚರಿತಾಮೃತ ಅಪಾರ ವಿಷಯ ಸಂಗ್ರಹಣೆಯನ್ನೊಳಗೊಂಡು ಶರಣ ಪರಂಪರೆಯನ್ನು ಅಧ್ಯಯನ ಮಾಡುವವರೇ ಅಲ್ಲದೆ ಇತರರೂ ಅಧ್ಯಯನ ಮಾಡಬೇಕಾದ ಗ್ರಂಥವಾಗಿದೆ. ಹಲವಾರು ಮೂಲಗಳಿಂದ ಸಂಗ್ರಹಿಸಿದ ಶರಣರ ಬದುಕಿನ ವಿವರಗಳು ಸಾಧನೆ ಸಿದ್ಧಿಗಳು ಸರಳವಾಗಿ ಆದರೆ ಮನೋಜ್ಞವಾಗಿ ಮೂಡಿಬಂದಿವೆ. ಶರಣರನ್ನು ಕುರಿತ ಒಂದು 'ಪುಟ್ಟ ವಿಶ್ವಕೋಶ' ಇದು.

ಅವರ ಎರಡು ವಚನ ಸಂಕಲನಗಳಲ್ಲಿ ಮೊದಲನೆಯದು ವಚನೋದ್ಯಾನ- ಅದನ್ನು ತೋಂಟದ ಸಿದ್ಧಲಿಂಗ ಯತಿಗಳಿಗೆ ಅರ್ಪಿಸಿದ್ದಾರೆ. ಅಷ್ಟೇ ಅಲ್ಲ ತಮ್ಮ ವಚನಗಳಿಗೆ ಇಟ್ಟುಕೊಂಡಿರುವ ಅಂಕಿತ- ಸ್ವತಂತ್ರ ಧೀರ ಸಿದ್ಧೇಶ್ವರಾ. 525 ವಚನಗಳನ್ನೊಳಗೊಂಡ ಈ ಕೃತಿ ಕಲಕತ್ತೆಯ ಭಾರತೀಯ ಭಾಷಾ ಪರಿಷತ್ತಿನವರು ನೀಡಿದ 'ಭಿಲ್ವಾರ' ಪ್ರಶಸ್ತಿಯನ್ನು ಪಡೆದು ಕನ್ನಡದ ಖ್ಯಾತಿಯನ್ನು ಭಾರತದ ಮಟ್ಟಕ್ಕೇರಿಸಿದೆ.

ಸಿದ್ಧಯ್ಯ ಪುರಾಣಿಕರು ಈ ಕೃತಿಯನ್ನು ತೋಂಟದ ಸಿದ್ಧಲಿಂಗರಿಗೆ ಅರ್ಪಿಸಿರುವುದು ಧ್ವನಿಪೂರ್ಣವಾಗಿದೆ. ಹನ್ನೆರಡನೆಯ ಶತಮಾನದ ಬದುಕಿಗೂ ವಚನಗಳಿಗೂ ಇರುವ ಸಂಬಂಧ ವಿಶಿಷ್ಟ ರೀತಿಯದು. ನೂತನ ಸಮಾಜ ನಿರ್ಮಾಣ ಸಂಕಲ್ಪದಿಂದ ಕೂಡಿದ ಧ್ಯೇಯಬದ್ಧ ತಂಡವೊಂದಕ್ಕೆ ಬಸವನಂಥ ನೇತಾರ ದೊರೆತದ್ದು- ವಚನಗಳು ಹೊಮ್ಮಿದ್ದು- ಅಧ್ಯಯನ ಯೋಗ್ಯವಾದ ವಿಚಿತ್ರ, ಸೃಜನಶೀಲ ಯುಗದ ಬದುಕಿನೊಂದಿಗೆ ಪಡೆದಿದ್ದ ಕರುಳು ಬಳ್ಳಿಯ ಸಂಬಂಧ ಅತ್ಯಂತ ಅಪೂರ್ವವಾದುದು. ಆದರೆ ಬಸವಣ್ಣನವರು ಕಲ್ಯಾಣವನ್ನು ಬಿಡುವಂತಾದ ಮೇಲೆ ಕಣ್ಮರೆಯಾದಂತೆ ಮರೆಯಾದ ವಚನದ ಸೃಜನಶೀಲತೆ ಮತ್ತೆ ಮೊಳಕೆಯೊಡೆದದ್ದು ಸಿದ್ಧಲಿಂಗರಲ್ಲಿ. ಜನಕ್ಕೆ ಮುಟ್ಟಬೇಕಾದ ಧರ್ಮವೊಂದರ ಸಾಧನವಾಗಿ ಸೃಜನಶೀಲರಾಗಿ ವಚನಗಳನ್ನು ಆತ ಬರೆದ. 'ಷಟ್‌ಸ್ಥಲಜ್ಞಾನ ಸಾರಾಮೃತ'ವೆಂದೇ ಖ್ಯಾತವಾದ ಆ

ಮುಂದಿನ ಪುಟ ನೋಡಿ

# ಕರ್ನಾಟಕ ಕಥೆ

* * *

ಕಾವ್ಯಾನಂದರೆಂದು ಖ್ಯಾತ ನಾಮರಾದ ಡಾ. ಸಿದ್ಧಯ್ಯ ಪುರಾಣಿಕರು ನಿಧನ ಹೊಂದಿದುದರಿಂದ ಕನ್ನಡದ ಧ್ವನಿ ಕ್ಷೀಣಗೊಂಡಿತು. ಅವರು ರಾಯಚೂರು ಜಿಲ್ಲೆಯ ದ್ಯಾಮಪುರದ ಪುರಾಣಿಕರ ಮನೆಯಲ್ಲಿ ಜನ್ಮವೆತ್ತಿ ಹರ್ಡೇಕರ ಮಂಜಪ್ಪನವರ ಆಶ್ರಮದಲ್ಲಿದ್ದು, ಅನಂತರ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಓದಿ, ನಿಜಾಮ ರಾಜ್ಯದಲ್ಲಿ ತಹಸೀಲ್ದಾರರಾಗಿ ತಮ್ಮ ಸೇವೆ ಆರಂಭಿಸಿದರು. ಕೊನೆಗೆ ಅವರು ಕರ್ನಾಟಕ ರಾಜ್ಯದ ಲೇಬರ್ ಹುದ್ದೆಗಳನ್ನು ಬಹಳ ಧಾರಾಳ ಯಶಸ್ಸಿನಿಂದ ನಿರ್ವಹಿಸಿದರು. ಅವರು, ಹಳೆಯ ಹೈದರಾಬಾದ ರಾಜ್ಯದಲ್ಲಿ ಡಾ. ಎಂ. ಚೆನ್ನಾರೆಡ್ಡಿಯವರು ಮಂತ್ರಿ ಆಗಿದ್ದಾಗ ಅವರ ಆಪ್ತ ಕಾರ್ಯದರ್ಶಿ ಆಗಿದ್ದರು.

ಬೆಳಗಾವಿ ಕೊಡಗುಗಳಲ್ಲಿ ಜಿಲ್ಲಾಧಿಕಾರಿ ಆಗಿದ್ದರು. ವಾರ್ತಾ ಇಲಾಖೆಯ ನಿರ್ದೇಶಕರಾಗಿದ್ದರು. ಕೆಲ ಕಾಲ 'ಲೋಕವಾಣಿ' ದಿನಪತ್ರಿಕೆಯ ಸಂಪಾದಕರಾಗಿದ್ದರು.

ಅವರಿಗೆ ತಮಗೆ ಭೀಮಸೇನರಾವ್, ಡಿ. ಕೆ। ಭೀಮಸೇನರಾವ್ ಹಾಗೂ ಮಾದ್ಲಿ



ಸಿದ್ಧಯ್ಯ ಪುರಾಣಿಕ

ನರಸಿಂಗರಾವ್‌ರವರೊಂದಿಗೆ ಅಭ್ಯಾಸ ಮಾಡಿ ಸ್ನೇಹಿತರಾಗಿದ್ದುಕೊಂಡು ಸಾಹಿತ್ಯ ಕೃಷಿ ಮಾಡಿದರು.

ಅವರ ಮದುವೆ ಧಾರವಾಡದಲ್ಲಿ ಆದುದರಿಂದ, ಅವರಿಗೆ ಬಂದು ಹೋಗುತ್ತಿದ್ದ ಅ.ನ.ಕೃ.ರವರ ನಿಕಟ ಸ್ನೇಹ ಲಭಿಸಿತು. ಅವರನ್ನು ಅನೇಕ ಸಾಹಿತ್ಯ ಕೃತಿಗೆ ಇನ್ನೂ ಹೆಚ್ಚು ಹುರಿದುಂಬಿಸಿದರು. ಕಾವ್ಯ ಅವರಿಗೆ ನಿಸರ್ಗ ಸೊಬಗು, ಕಾವ್ಯಾನಂದ ಎಂಬ ಹೆಸರು ಅವರಿಗೆ ಅನ್ವರ್ಥಕವೆನಿಸಿತ್ತು. ಗದ್ಯದಲ್ಲಿಯೂ ಅವರು, ಪದ್ಯದಲ್ಲಿಯಂತೆ ಎತ್ತಿದ ಕೈ. ಅವರು ಬಹು ಸರಸವಾಗ್ಮಿ. ಉರ್ದು ಇಂಗ್ಲೀಷು ಹಾಗೂ ಸಂಸ್ಕೃತಗಳಲ್ಲಿ ಅವರು ದೊಡ್ಡ ಸ್ನಾತಕರಾದುದರಿಂದ ಅವರ ಕನ್ನಡಕ್ಕೆ ಹೆಚ್ಚಿನ ಪರಿಪೋಷಣೆ ದೊರೆತು ಅದು ಹೆಚ್ಚು ಹುಲುಸು ಪಡೆದಿತ್ತು.

ಕನ್ನಡಕ್ಕೋಸುಗ ಅವರು ಬಹಳಷ್ಟು ದುಡಿದರು. ಕನ್ನಡಕ್ಕೆ ಸಂಬಂಧಿಸಿದ ಎಲ್ಲ ಹೋರಾಟಗಳಲ್ಲಿಯೂ ಅವರು ಸಕ್ರಿಯವಾಗಿ ಭಾಗವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಕೊಟ್ಟು ಸನ್ಮಾನಿಸಿತು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಗೌರವ ಪಡೆದಿದ್ದರು. ಅವರಿಗೆ ಸಾಹಿತ್ಯದ ಬಹುಮಾನಗಳೂ ರಾಜ್ಯ ಪ್ರಶಸ್ತಿಗಳೂ ಬಂದಿದ್ದವು.

ಅವರ ವಿಕಸನಗಳಾಗುವರಿಗೆ ಪ್ರಶಸ್ತಿಯನ್ನು ತಂದುಕೊಟ್ಟಿದ್ದವ. ಏನಾದರೂ ಆಗುವ ಮೊದಲು ಮಾನವನಾಗು ಎಂದು ಅವರು ಮನುಷ್ಯರಿಗೆಲ್ಲ ಕರೆಕೊಟ್ಟಿದ್ದರು. ಅವರ ಶರಣ ಚಿಂತಾಮೃತ ಒಂದು ಬಹು ಅಮೂಲ್ಯಕೃತಿ. ಅವರ ಹೆಂಡತಿ ಹಾಸಿಗೆ ಹಿಡಿದಿದ್ದರು. ಅಂಥದರಲ್ಲಿ ಅವರು ಹೋದುದು ಒಂದು ಬಹು ದೊಡ್ಡ ದುರಂತ. ಕನ್ನಡ ಒಬ್ಬ ಅಪ್ರತಿಮ ಹೋರಾಟಗಾರನನ್ನು ಕಳೆದುಕೊಂಡಿತು

* * *



ಶ್ರೀ ಶರಣ

## ಶಿವಗಣಾರಾಧನಾಹ್ವಾನಾ ಪತ್ರಿಕಾ

ನನ್ನ ಪೂಜ್ಯ ಪತಿ ಡಾ॥ ಸಿದ್ಧಯ್ಯ ಪುರಾಣಿಕ ಐ.ಎ.ಎಸ್. (ನಿವೃತ್ತ) ಇದೇ ಶ್ರಾವಣ ಬಹುಳ ಚತುರ್ದಶಿಯಂದು ದಿನಾಂಕ 5-9-1994ರ 00-30 ಘಂಟೆಗೆ ಲಿಂಗೈಕ್ಯರಾದರು.

ಅವರ **ಶಿವಗಣಾರಾಧನೆಯನ್ನು** ಭಾನುವಾರ ದಿನಾಂಕ 18-9-1994 ರಂದು ಮಧ್ಯಾಹ್ನ 12-30 ಘಂಟೆಗೆ ಏರ್ಪಡಿಸಲಾಗಿದೆ. ತಾವು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಶಿವಗಣಾರಾಧನೆಯ ಸ್ಥಳ :**
ಐ.ಎ.ಎಸ್. ಅಧಿಕಾರಿಗಳ ಸಂಘದ ಆವರಣ,
ಪೋಲಿಸ್ ಕಮೀಶನರ್‌ರ ಕಚೇರಿಯ ಹತ್ತಿರ,
ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು – 560 052.

ಗಿರಿಜಾದೇವಿ ಪುರಾಣಿಕ
415A, ಅಲಿ ಅಸ್ಕರ್ ರಸ್ತೆ,
ಬೆಂಗಳೂರು – 560 052.
ಹಾಗೂ ಸೋದರರು, ಸೋದರಿ, ಪುತ್ರ, ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಬಂಧು ವರ್ಗದವರು



ಡಾ॥ ಸಿದ್ಧಯ್ಯ ಪುರಾಣಿಕ
ಕಾವ್ಯಾನಂದ

ತೆರೆದ-ಅಂಚೆ

ಶ್ರೀಮತಿ/ಶ್ರೀ ..............................

..............................

..............................

PUB: PRAPANCHA
DATE: 18/9/94
NEWS ITEM: KARNATAKA STORY

# ಹಳ್ಳಿಬಾಳಿನ ರಜತ ಪರದೆಯ ಮೇಲೆ

ಡಾ|| ಸಿದ್ದಯ್ಯ ಪುರಾಣಿಕರ
ಆತ್ಮಕಥನ - ೫

ನಮ್ಮೂರಿನ ಇನ್ನೊಂದು ಹೆಮ್ಮೆ ನಯನ ಮನೋಹರವಾಗಿದ್ದ ದೊಡ್ಡ ಮಾವಿನ ತೋಪು. ವಾರಕ್ಕೆ ಒಂದೆರಡು ಸಲವಾದರೂ ಊರ ಬಾಲಕ-ಬಾಲಕಿಯರೆಲ್ಲ ಅಲ್ಲಿ ಸೇರಿ ಕಣ್ಣು ಮುಚ್ಚಾಲೆ, ಮುಟ್ಟಾಟ ಮರಮಂಗನಾಟ ಆಡ[illegible]ದ್ದರು. ಮನೆಯಿಂದ ತಂದ '[illegible]'ಗಳನ್ನೋ 'ಮಂಡಿಕ್ಕಿ'ಗಳನ್ನೋ ತಿಂದು ನಲಿಯುತ್ತಿದ್ದರು. ಹಣ್ಣಿಗೆ ಬಂದ ಮಾವಿನ ಕಾಯಿಗಳನ್ನು, 'ಇಳುಹುವ' ಸಮಯ ಬಂದಿತೆಂದರೆ ಊರಲ್ಲೆಲ್ಲ ಹಬ್ಬದ ವಾತಾವರಣ ಶಾಲೆಗೆ ರಜೆ. ಊರ ನಾರಿಯರೆಲ್ಲ ಬಾಲಕ ಬಾಲಕಿಯರೆಲ್ಲ ಮಾವಿನ ತೋಪಿನಲ್ಲಿ ಹಾಜರ್. ಏಕೆಂದರೆ ಮಾವಿನ ತೋಪು ಯಾರೊಬ್ಬರಿಗೂ ಸೇರಿದುದಲ್ಲ -ಊರವರೆಲ್ಲರ ಸಾಮೂಹಿಕ ಸೊತ್ತು.

ಇಳಿಸಿದ ಕಾಯಿಗಳನ್ನು ಉಪ್ಪಿನಕಾಯಿಯ ಕಾಯಿಗಳೆಂದೂ, ಹಣ್ಣಾಗಲು ಅಡಿಗೆಗೆ ಹಾಕುವ ಕಾಯಿಗಳೆಂದೂ ಬೇರೆ-ಬೇರಾಗಿ ರಾಶಿ ಮಾಡಿ ಅವುಗಳನ್ನು ಸರ್ವರಿಗೂ ಸಮಾನವಾಗಿ ಹಂಚುತ್ತಿದ್ದರು. ಕಾಯಿ ಇಳಿಸುವ 'ದೋಟಿ'ಯಲ್ಲಿ ಮರದಲ್ಲಿಯೇ ಮಾಗಿದ ಒಂದೊರಡು ಹಣ್ಣು ಬರುತ್ತಿತ್ತು. ಅಂಥ ಹಣ್ಣುಗಳೆಲ್ಲ ನಮ್ಮ ಪಾಲಿಗೆ ಸಂಜೆಯಾಗುವುದರೊಳಗಾಗಿ ಎಲ್ಲ ಬಾಲಕ ಬಾಲಕಿಯರೂ ಹೊಟ್ಟೆ ಬಿರಿವವರೆಗೆ ಹಣ್ಣು ತಿಂದು ತಾವು ಹೊರುವಷ್ಟು ಹಣ್ಣುಗಳನ್ನು ಮನೆಗೆ ಒಯ್ಯುತ್ತಿದ್ದರು. ಬಾರದವರನ್ನುವವರು ಇದ್ದುದೇ ಆದರೆ ಅವರೂ ಆಕಾಶದಲ್ಲಿ ನಿಂತು ನೋಡಬೇಕಾದ ನೋಟವದು.



ಮರುದಿನ ಊರ ತುಂಬ ಉಪ್ಪಿನಕಾಯಿ ಹಾಕುವ, ಮಾಗಲಿದ್ದ ಮಾವಿನ ಕಾಯಿಗಳನ್ನು ಅಡಿಗೆ ಹಾಕುವ ಸಂಭ್ರಮ ಹೀಗಾಗಿಯೇ, ಊರ ಹೆಂಗಳೆಯರು ಅಘೋಷಿತ ಸಹಕಾರ ಪದ್ಧತಿಯಂತೆ ಕಟ್ಟೆಗೆ ಜೋಡಿಸಿದ ಸಾಲು ಮನೆಗಳ ಮೇಲೆ ಕುಳಿತು ಸೇವಿಗೆ ಹೊಸೆದುಕೊಳ್ಳುತ್ತಿದ್ದ ನೋಟ, ಗಂಡಸರು ಕಲ್ಲಾರಿನಿಂದ ಬೇಸಾಯಕ್ಕೆ ಬೇಕಾಗುವ ಹಗ್ಗ, ಕಣ್ಣೆ ಇತ್ಯಾದಿಗಳನ್ನು ಹೊಸೆದುಕೊಳ್ಳುತ್ತಿದ್ದ ನೋಟ, ಕಮ್ಮಾರ ಶಾಲೆಯಲ್ಲಿ ಬಂಡಿಗಾಲಿಗೆ 'ಹಳೆ'ಯನ್ನು ಜೋಡಿಸಿಕೊಳ್ಳುವ ನೋಟ, ಬಡಿಗ ಶಾಲೆಯಲ್ಲಿ ಕೂರಿಗೆ, ಕುಂಟೆ, ನೇಗಿಲು, ಬಂಡಿ ಮೊದಲಾದವುಗಳನ್ನು ಸರಿಪಡಿಸುತ್ತಿದ್ದ ನೋಟ, ನಾಗರಪಂಚಮಿಯ ಜೋಕಾಲಿಗಳ ನೋಟ, ಊರಿಗೆ ವಿನೋದವನ್ನು ಒದಗಿಸುತ್ತಿದ್ದ ವೇಷಗಾರರ, ಹಾವಾಡಿಗರ, ಡೊಂಬರಾಟದವರ, ಕರಡಿ ಕುಣಿಕದವರ, ದುರುಗಮುರಗಿಯವರ, ಕೌಲತ್ತಿನವರ, ಸಾರುವ ಬಸವರ ನೋಟ, ಬಲ ಪ್ರದರ್ಶನಕ್ಕಾಗಿ ನಡೆಯುತ್ತಿದ್ದ ಗರಡಿ ಮನೆಯ ಮಲ್ಲರ ಕುಸ್ತಿ, ಗುಂಡೆತ್ತುವ, ಹಲ್ಲಿನಿಂದ ಕೊಡ ಎತ್ತುವುದು, ಒಂದೆ ಕೈಯಿಂದ ತುಂಬಿದ ದೊಡ್ಡ ಕೊಡ ಸೇದುವುದು ಇತ್ಯಾದಿಗಳ ನೋಟ.

ಪೇರಲ, ನೇರಿಳೆ, ಕವಳಿ, ಕಾರಿಯ ಹಣ್ಣುಗಳನ್ನೋ, ಉಪ್ಪುಗಡಲೆ, 'ಒಡೆ' ಇತ್ಯಾದಿ ತಿನಿಸುಗಳನ್ನೋ ಬರುತ್ತಿದ್ದ ಅಜ್ಜಿಯರ ನೋಟ, ಬಗೆ ಬಗೆಯ ಬಿಕ್ಷುಕರ ನೋಟ ಒಂದೇ-ಎರಡೇ-ನೂರಾರು ನೋಟಗಳ ಸುರುಳಿ ಬಿಚುತ್ತಿತ್ತು ಹಳ್ಳಿ ಬಾಳಿನ ರಜತ ಪರದೆಯ ಮೇಲೆ! ಇಲ್ಲನ್ನರು. ಯಾರನ್ನೂ ಬರಿಗೈಯಿಂದ, ಬರಿಹೊಟ್ಟೆ ಯಿಂದ ಕಳಿಸದ ಧರ್ಮಾತ್ಮರು ಆಗಿನ ಹಳ್ಳಿಯವರು. (ಸಶೇಷ)

ನಮ್ಮ ಪತ್ರಿಕೆಗಾಗಿ ಸಂಕ್ಷಿಪ್ತವಾಗಿ ತಮ್ಮ ಆತ್ಮ ಕಥನವನ್ನು ಬರೆದುಕೊಟ್ಟ ಡಾ|| ಸಿದ್ದಯ್ಯ ಪುರಾಣಿಕರು ಇನ್ನಿಲ್ಲ. ಇವರು ಪತ್ರಿಕೆಯ ಮೇಲೆ ಅಪಾರವಾದ ವಿಶ್ವಾಸ ಪ್ರೀತಿಯನ್ನು ಇಟ್ಟಿದ್ದರು. ಹಾಗಾಗಿಯೇ ಡಾ|| ಪುರಾಣಿಕರು ತಮ್ಮ ನಿವೃತ್ತಿ ನಂತರದ ಬದುಕನ್ನು ಕುರಿತು ಆದಷ್ಟು ಬೇಗ ಬರಕೊಡುತ್ತೇನೆ ಅಂತ ಹೇಳಿದ್ದರು.ಆದರೆ ಅವರು ಕಾಲನ ತುಳಿತಕ್ಕೆ ಸಿಕ್ಕಿದ್ದರಿಂದ ಇದು ಸಾಧ್ಯವಾಗಲಿಲ್ಲ.

ಡಾ|| ಪುರಾಣಿಕರು ಈ ಹಿಂದೆ ಬರಕೊಟ್ಟ ಆತ್ಮಕಥನವನ್ನು ಎಂದಿನಂತೆ ಪತ್ರಿಕೆ ಪ್ರಕಟಿಸುತ್ತದೆ. ಪುರಾಣಿಕರ ನಿಧನಕ್ಕೆ ಪತ್ರಿಕೆಯ ಬಳಗ ತನ್ನ ತೀವ್ರ ಶೋಕ ವ್ಯಕ್ತಪಡಿಸುತ್ತದೆ.

- ಸಂಪಾದಕರು

Kannada

03 Jeevan Sadhane

↓

04 Patrika Varadi

↓

04 on the eve of demise
1994

put all clipping in
this folder

# ಡಾ || ಸಿದ್ಧಯ್ಯ ಪುರಾಣಿಕ-ಒಂದು ನೆನಪು

ಭಾರತೀಯ ಭಾಷೆಯ ಯಾವುದೇ ಭಾಷೆಯ ಶ್ರೇಷ್ಠ ಕೃತಿಗೆ ಭಾರತೀಯ ಮಟ್ಟದ ಗೌರವವನ್ನು ನೀಡುವ ಒಂದು ಪ್ರಮುಖ ... [illegible]

[illegible]



ಪ್ರೊ || ಜಿ.ಎಸ್. ಸಿದ್ಧಲಿಂಗಯ್ಯ

... ನೋಡಿದಾಗ ಸಿದ್ಧಯ್ಯ ಪುರಾಣಿಕರು ... [illegible]

... ಈ ಕೆಲವು ವಚನಗಳನ್ನು ಗಮನಿಸಿ:

೧) ನನಗೆ ತೋರಿದಂತೆ ಬರೆದರೆ
ಅದು ರಚನೆ
ನೀನು ತೋರಿಸಿದಂತೆ ಬರೆದರೆ
ಅದು ವಚನವಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರ ಪ್ರಭುವೇ.

೨) ವಿದ್ಯೆ ಬಂತು, ವಿನಯ ಹೋಯ್ತು;
ಬುದ್ಧಿ ಬಂತು, ಶ್ರದ್ಧೆ ಹೋಯ್ತು;
ಶ್ರದ್ಧೆ ಬಂತು, ವಿವೇಚನೆ ಹೋಯ್ತು;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು;
ವಿಜ್ಞಾನ ಬಂತು, ಸಮಾಧಾನ ಹೋಯ್ತು;
ಶರೀರ ಸ್ವಾಸ್ಥ್ಯ ಬಂತು, ಚಿತ್ತಸ್ವಾಸ್ಥ್ಯ ಹೋಯ್ತು;
... [illegible]
ಸಿದ್ಧಯ್ಯ ಪುರಾಣಿಕ ಬಂದ
ಸ್ವತಂತ್ರಧೀರ ಸಿದ್ಧೇಶ್ವರ ಹೋದ.

[illegible]

ಫಲವಿತ್ತ ರೆಂಬೆ ಬಾಗುತ್ತದೆ
ಗೊನೆ ಹೊತ್ತ ಬಾಳೆ ಬಾಗುತ್ತದೆ
ತೆನೆ ಹೊತ್ತ ದಂಟು ಬಾಗುತ್ತದೆ
ಏನೇನೋ ಇಲ್ಲದುದು ಬೀಗುತ್ತದೆ
ನೋಡಾ
ಸ್ವತಂತ್ರ ಧೀರ ಸಿದ್ಧೇಶ್ವರಾ.

ಈ ವಚನದ ಸೊಗಸಂತೂ ಧ್ಯಾನಯೋಗ್ಯವಾದುದು.

... ಇದೇ ಸಂಕಲನದ ಇನ್ನೂ ಕೆಲವು ಉದಾಹರಣೆಗಳನ್ನು ನೋಡಿ:

೧) ಹೂವು ತನ್ನೆದೆಯ ತೆರೆದರೆ
ಅದು ಸುಂಗಧ ಮಕರಂದಗಳ ಸುಗ್ಗಿ
ತೆಂಪುಗಳ ತನ್ನೆದೆಯ ತೆರೆದರೆ
ಮುತ್ತುಗಳ ಬರುವವು ಸುಗ್ಗಿ
ಹನುಮ ತನ್ನೆದೆಯ ತೆರೆದರೆ
ಸೀತಾರಾಮರ ಚಿತ್ರ
ಇರುಳು ತನ್ನೆದೆಯ ತೆರೆದರೆ ಕೋಟಿ ಕೋಟಿ
ನಕ್ಷತ್ರ
ಎಲ್ಲರೆದೆಗಳಲ್ಲಿ ಒಂದಿಲ್ಲೊಂದು ನಿಧಿ
ನಿಧಾನ ನಿನ್ನ ವರಕೃಪಾದಿ
ನನ್ನೆದೆಯಲ್ಲಿ ನೀನಾದರೂ ಇರಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ.

೨) [illegible]
ಮಾನವರನ್ನಾಗಿ ಮಾಡಿ ಇದೀ ಸುಂದರ
ಜಗತ್ತಿನಲ್ಲಿ
ಉಳಿಸಿ ಬೆಳೆಸಿ ಬೆಳಗಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ.

೩) ಹಳೆರೆಕ್ಕೆ ಕಳಚಿದವು ಹೊಸರೆಕ್ಕೆ
ಕೊನರಿದವು
ಹಕ್ಕಿಮಾತ್ರ ಮೊದಲಿನದೇ ಅಯ್ಯ
ಹಣ್ಣೆಲೆಗಳು ಉದುರಿದವು ಹಸಿರೆಲೆಗಳು
ಚಿಗುರಿದವು
ಮರ ಮಾತ್ರ ಮೊದಲಿನದೇ ಅಯ್ಯ
ನಿನ್ನ ಹೆಸರಲ್ಲಿ ಹಳೆಹೊಸ ಗ್ರಂಥಪಂಥಗಳೂ
ವೇದಾಂತ ಸಿದ್ಧಾಂತ ರಾದ್ಧಾಂತಗಳಲ್ಲಿ
ಹುಟ್ಟಿದರೂ
ನೀನು ಮಾತ್ರ ಮೊದಲಿಗ
ಮೂಲಿಗರಲ್ಲಿ ಮೂಲಿಗನಯ್ಯ ಸ್ವತಂತ್ರ ಧೀರ
ಸಿದ್ಧೇಶ್ವರಾ.

೪) ಹೋಮರನಂಥ ವಿಶ್ವಕವಿಗಳು ಬಿಕ್ಷೆ
ಬೇಡಬೇಕು
ಹೆಂಡ ಮಾರುವವರು ಲಕ್ಷಾಧೀಶರಾಗಬೇಕು
ಇದು ನಿನ್ನ ಸಾಮಾಜಿಕ ನ್ಯಾಯವೇನಯ್ಯ,
ದುಡಿದವರಿಗೆ ದುಗ್ಗಾಣಿ ದುಡಿಸಿಕೊಳ್ಳುವವರಿಗೆ ಲಕ್ಷೈಶ್ವರ್ಯ,
ಇದೇ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯ ?

ಮೇಲಿನ ನಾಲ್ಕು ವಚನಗಳು ವಿಷಯ ವೈವಿಧ್ಯವನ್ನು ಅಭಿವ್ಯಕ್ತಿಯ ಸೊಬಗನ್ನೂ ... [illegible]



[illegible]

### ಕವಿ ಮತ್ತು ದಾರ್ಶನಿಕ ಡಾ||ಸಿದ್ಧಯ್ಯ ಪುರಾಣಿಕ

[illegible]

ಪುರಾಣಿಕ ಸಿದ್ಧಯ್ಯನವರು ಮಕ್ಕಳಿದ್ದ ... [illegible]

... ಸಿದ್ಧಯ್ಯ ಪುರಾಣಿಕರ ... [illegible]

ಕುವೆಂಪು.

-ಪ್ರಾ. ಶಿ. ಮರು...



# Siddaiah Puranik is dead

**By A Staff Reporter**

BANGALORE, Sept 5: Noted Kannada litterateur, Dr Siddaiah Puranik, died here today. He was 76. He is survived by his wife, three daughters and a son.

Dr Puranik (BA, LLB), who retired as labour commissioner, Karnataka, after holding several important posts, was a senior IAS officer and an eminent Kannada writer with over 35 works to his credit. His famous books include *Jalapatha, Modalu Manavanaagu, Vachanodhyana (a book of modern vachanas), Sharana Charitamruta* and *Siddarama* – all written under the pen name *Kaavyananda.*

Dr Puranik had won several awards, including the central and state Sahithya Academy awards, the S.S. Malavada literature award, Bengal award for Southern languages and was the first Kannadiga to receive the "Billara" award from the Bharatiya Bhasha Parishat.

He was the president of the 58th Kannada Sahithya Sammelana held at Gulbarga in 1987 and member of the central and state Sahithya Academies. The Karnatak university, Dharwad, had conferred a doctorate on him for his contribution to the literary world. He was a member of the Kannada Development Authority, and participated in several

Continued on page 16

# Siddaiah Puranik dead

**Continued from Page 1**

pro-Kannada movements, including the Gokak agitation. He was also a scholar in Sanskrit, Urdu, Marathi and Persian.

In a condolence message, the governor, Mr Kurshed Alam Khan, said, the state had lost a person who fought relentlessly for Kannada language and literature.

The chief minister, Mr M. Veerappa Moily, Dr Puranik's death has left a void in the world of Kannada literature.

The former chief minister, Mr Ramakrishna Hegde, said, that Dr Puranik was a very good administrator, poet and writer, deeply concerned with the development of Kannada culture, language and literature.

Mr Go.Ru. Channabasappa, president, Kannada Sahitya Parishat, said that Dr Puranik's death was a great loss to the world of Kannada literature.

The Janata Dal president, Mr S.R. Bommai, leader of opposition in the assembly, Mr R.V. Deshpande, and writers Mr Baraguru Ramachandrappa and Dr Chidananda Murthy have also condoled the death of Dr Puranik.

PUB: TIMES OF INDIA

DATE: 6/9/94

NEWS ITEM: FRONT PAGE

## Siddaiah Puranik is dead

**Bangalore:** Noted Kannada litterateur and eminent administrator, Dr Siddaiah Puranik, died here early on Monday. He was 76. He is survived by wife and three children.

His famous books included, *Jalapatha, Modalu Manavanaagu, Vachanodhyana, Sharana Charitamruta* and *Siddarama* -- all written under the penname 'Kaavyananda.'

PUB: ECONOMIC TIMES.

DATE: 6/9/94

NEWS ITEM: NEWS LINE FRONT PAGE



The Chief Minister, Mr. Veerappa Moily, paying homage to noted Kannada writer, Siddaiah Puranik, who passed away in Bangalore on Monday. The Transport Minister, Mr. Bhimanna Khandre (wearing spectacles) is with him.-Report on page 13

**Siddaiah Puranik**

BANGALORE, Sept. 5.

Mr. Siddaiah Puranik, noted Kannada writer and retired IAS officer passed away here today. He was 76 and is survived by his wife, a son and two daughters.

Poetry was the forte of Mr. Puranik, who wrote under the pen name 'Kavyananda'. He had presided over the 58th Kannada Sahitya Sammelana and was in recent years active in safeguarding interests of Kannada and Kannadigas. He was the president of the Karnataka Vikasa Vedike.

PUB : THE HINDU
DATE : 6/9/94
NEWS ITEM : REGIONAL NEWS PAGE. OBITUARY COLUMN

## Noted Kannada poet is dead

BANGALORE, Sept. 5 (UNI) Noted Kannada poet Siddaiah Puranik died here today. He was 78.

Better known by his pen name "Kavyananda", Dr Puranik had written several novels and poems, besides research articles on literature. His popular works included Vachanamrutha, Jalapatha and Modalu Manavanagu. His poem 'Ajjana Kolidu Nannaya Kudure' is a very popular Kannada rhyme among school-children.

Dr Puranik, a former IAS officer, had served the literary field for over four decades. He was awarded a doctorate by the Karnataka University in 1976.

He has won several awards, including a State award in 1991. He was the first recipient of Bharatiya Basha Parishat in 1986.

Dr Puranik, who presided over the 58th Kannada Sahitya Sammelan in Gulbarga, was associated with several pro-Kannada movements, including the Gokaka agitation.

PUB: HINDUSTAN TIMES
DATE: 6/9/94
NEWS ITEM: REGULAR NEWS PAGE

## Renowned Kannada poet dead

BANGALORE: Noted Kannada poet Siddaiah Puranik died here on Monday. He was 78. Better known by his pen name, "Kavyananda", Dr Puranik had written several novels and poems, besides research articles on literature. His popular works include *Vachanamrutha*, *Jalapatha* and *Modalu Manavanagu*. His poem, *Ajjana Kolidu Nannaya Kudure*, is a very popular Kannada rhyme among school children.

## Building collapse claims five

BOMBAY: At least five persons were killed and 10 others injured when a five-storey building, "Shimpi Chawl", collapsed on a chawl at Zaveri Bazar, south Bombay, early on Monday morning, police said. The building that collapsed was under repair and the deceased were labourers from Bengal, police said.

## Tripura ultras kill CPM activist

AGARTALA: Tribal guerrillas gunned down a CPI(M) activist, shot at another partyman and kidnapped a tribal youth, while security forces unearthed a mini gun factory in Tripura on Sunday. Police sources said heavily-armed militants shot dead CPI(M) activist Rabindra Debbarma from close range at Jirania in West Tripura on Sunday night.

PUB: THE PIONEER
DATE: 6/9/94
NEWS ITEM: NATIONAL BRIEFS.



# Siddaiah Puranik dead

★★ BANGALORE — Renowned Kannada poet and retired IAS officer Siddaiah Puranik died here in the early hours of Monday.

He was 78 and is survived by his wife, three daughters and a son.

Writing under the pen name 'Kavyananda', Dr Puranik had written several novels and poems, besides research articles on literature. His poem 'Ajjana kolidu nannaya kudure' is a very popular Kannada rhyme among school children.

Condoling the death of the poet, Karnataka Governor Khurshed Alam Khan said the State had lost a person who fought relentlessly for Kannada language and literature. Chief Minister Veerappa Moily, in a message, also expressed grief. A host of other political and cultural luminaries and organisations have also expressed grief at his demise.

Both the Houses of Karnataka Legislature observed a minute's silence as a mark of respect to the departed poet, who was the recipient of several awards, including the State award in 1991.● ENS

## Kavyananda

☐ "Enaadaru aagu, modalu maanavanaagu" (Be what you will but be human first). That was the famous line in a poem written by Dr.Siddaiah Puranik who passed away early this week. The poet turned administrator joined service as Tahsildar in the Nizam's rule and was confirmed into IAS before retiring as labour commissioner. Being an able administrator and a prolific creative writer is an odd combination. But Dr.Puranik was an exception.

Born at Dyampur village in Yelburga taluk of Raichur district, a remote corner of a highly backward area, Dr.Puranik dedicated himself to the cause of Kannada, that too during the hard days of Nizam when Urdu was the only

PUB : INDIAN EXPRESS
DATE 6/9/94 & 11/9/94
NEWS ITEM : NEWS LINE FRONT PAGE & EXPRESS DIARY

25.9.94

## ಡಾ|| ಸಿದ್ದಯ್ಯ ಪುರಾಣಿಕ್-ಒಂದು ನೆನಪು

'ಕೊಡಗನ್ನು ನೆನೆದರೆ ಕಹಿಯೂ ಸಿಹಿಯಾಗುತ್ತದೆ'' ಎಂದು ತನ್ನ ಮನದಿಂಗಿತವನ್ನು ಕೊಡಗಿನ ಬಗೆಗೆ ವ್ಯಕ್ತಪಡಿಸಿದ ನಾಡಿನ ಹಿರಿಯ ಚೇತನ ಕವಿ ಡಾ|| ಸಿದ್ದಯ್ಯ ಪುರಾಣಿಕ್ ಅವರು ಇಂದು ನಮ್ಮ ನಡುವೆ ಇಲ್ಲ. 1965 ರಿಂದ 67 ರವರೆಗೆ ಕೊಡಗಿನ ಜಿಲ್ಲಾಧಿಕಾರಿಯಾಗಿ ಅತ್ಯಂತ ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಇಲ್ಲಿಯ ಜನರ ಅಪಾರ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದರು. ಜೊತೆಗೆ ಕೊಡಗಿನ ಪ್ರಕೃತಿ ಸೌಂದರ್ಯ ಹಾಗೂ ಜನರ ಪ್ರೀತಿ ಆದರಗಳು ಡಾ|| ಪುರಾಣಿಕ್ ಅವರ ಮನಸ್ಸನ್ನು ಸೂರೆಗೊಂಡಿದ್ದವು. ಸುಮಾರು ಎರಡು ವರ್ಷಗಳ ಕಾಲ ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡಿ ಬೇರೆ ಜಿಲ್ಲೆಗೆ ಹೋದಾಗಲೂ ಕೊಡಗಿನ ಜನರ ಉದಾರ ಗುಣಗಳನ್ನು ಹಾಗೂ ಇಲ್ಲಿನ ನಿಸರ್ಗದ ಸೊಬಗು ಅವರ ಮನಸ್ಸಿನಿಂದ ಎಂದೂ ದೂರವಾಗಲಿಲ್ಲ. ಇದಕ್ಕೆ ಅವರಾಡಿದ ಈ ಮಾತುಗಳೇ ಸಾಕ್ಷಿ.

'.ಕೊಡಗನ್ನು ನೆನೆದರೆ ಕಹಿಯೂ ಸಿಹಿಯಾಗುತ್ತದೆ. ಸಿಹಿ ಜೇನು ಕಿತ್ತಳೆಗಳ ಸೀಮೆಯಲ್ಲಿ ಗಾಳಿಯನ್ನು ಉಸಿರಾಡಿದಾಗ 'ಮಧುವಾತಾಋತಾಯತೇ' ಎಂಬ ಭಾವನೆ ಉಂಟಾಗುತ್ತದೆ'' ಇಲ್ಲಿನ ಜನತೊಡನೆ ಒಡನಾಡುವಾಗ ಮನದ ಮಧುಮಾತುಗಳಲ್ಲಿ ಜೇನಾಗಿ ಜಿನುಗುವ ಅನುಭವ ಉಂಟಾಗುತ್ತದೆ. ಇದು ಡಾ||

ತನ್ನದೇ ಆದ ಪರಂಪರೆಯನ್ನು ಸತ್ಸಂಪ್ರದಾಯಗಳನ್ನು ಯತೇಚ್ಛ ಪ್ರಕೃತಿ ಸಂಪನ್ಮೂಲಗಳನ್ನು, ರಮಣೀಯತೆ, ಪಾವನತೆಗಳ ಸ್ಥಾನಗಳನ್ನು ಪಡೆದ ಈ ಪುಟ್ಟ ಜಿಲ್ಲೆ ದಿವಂಗತ ಪುರಾಣಿಕ್ ಅವರಿಗೆ ಕರ್ನಾಟಕದ ಕಾಮಧೇನೂ, ಕಲ್ಪವೃಕ್ಷವಾಗಿತ್ತು. ಎಲ್ಲ ಜಾತಿ ಮತಗಳ ಜನರು ಸೌಹಾರ್ದದಿಂದಿರುವ ಈ ಸಾಮರಸ್ಯ ಕ್ಷೇತ್ರದಲ್ಲಿ ಎಲ್ಲ ಬಗೆಯ ಸೌಕರ್ಯಗಳೂ ಸಂಪತ್ತು, ಸಮೃದ್ಧಿಯೂ, ಸಂಸ್ಕೃತಿಯೂ ಹೆಚ್ಚಿಗೆ ಇದ್ದು ಇದು ಮಾದರಿ ಜಿಲ್ಲೆಯಾಗಲಿ ಎಂದು ಮಹಾನ್ ಮಾನವತಾವಾದಿ ಸಿದ್ದ ಡಾ|| ಸಿದ್ದಯ್ಯ ಪುರಾಣಿಕ್ರ ಆಸೆಗೆ ಕೊಡಗಿನ ಜನತೆ ತಮ್ಮ ಅಂತಿಮ ನಮನವನ್ನು ಸಲ್ಲಿಸಪಡು ಮಾನವ ಧರ್ಮವಾಗಿದೆ.

''ಕಾವ್ಯಾನಂದ'' ಎಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಜನಪ್ರಿಯತೆಗಳಿಸಿದ್ದ ಡಾ|| ಪುರಾಣಿಕರು, ಆಡಳಿತ ಕ್ಷೇತ್ರಕ್ಕಿಂತ ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚಿನ ಸೇವೆ ಸಲ್ಲಿಸಿದ್ದರು. ಈ ಮೂಲಕವೇ ಇವರು ನಾಡಿನ ಜನತೆಗೆ ಹೆಚ್ಚಿನ ಚಿರ-ಪರಿಚಿತರು. 'ಅಜ್ಜನ ಕೋಲಿದು ನನ್ನಯ ಕುದುರೆ' 'ಮೊದಲು ಮಾನವನಾಗು' ಎಂಬ ಇವರ ಕವಿತೆಗಳು ಕನ್ನಡಿಗರೆದೆಯಲ್ಲಿ ಸದಾ ಹಸಿರಾಗಿ ಉಳಿಯುತ್ತವೆ.

ಒಟ್ಟಿನಲ್ಲಿ ತುಂಬು ಹೃದಯದ ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡು, ದಕ್ಷತೆ

## Kannada poet dead

**BANGALORE, Sept. 6.** — Noted Kannada poet, Siddaiah Puranik, died here today, reports UNI. He was 78. Better known by "Kavyananda", Dr Puranik's popular works included Vachanamrutha, Jalapatha and Modalu Manavanagu. His poem "Ajjana Kolidu Nannya Kudure" is a very popular Kannada rhyme.

PUB : THE STATESMAN

DATE : 6/9/94

NEWS ITEM : INDIA DIGEST

## Litterateur

■ **Bangalore** (PTI): Noted Kannada litterateur Siddaiah Puranik, 76, died here on Monday. Siddaiah, also an IAS officer, has written several books, including *Jalapatha* and *Modalu Manavanaagu*.

PUB : THE TELEGRAPH

DATE : 6/9/94

NEWS ITEM : INDIA BRIEFS